ವಿಕ್ರಮಯುಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 10 ಸಂಚಿಕೆ 9 ಫೆಬ್ರುವರಿ 28, 1988 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ರಾಜೀವ್ ಸರಕಾರದ ದುರಾಡಳಿತದಿಂದ

"ಭಾರತವನ್ನು ರಕ್ಷಿಸಿ" - ಫೆಬ್ರವರಿ 23 ರ ಕರೆ

ಮಾರ್ಚ್ 15ರಂದು ಭಾರತ್ ಬಂದ್ ಕರೆಗೆ ಪೂರ್ವ ಭಾವಿಯಾಗಿ ದೇಶದ ಎಡ ಮತ್ತು ಜಾತ್ಯಾತೀತ ಪ್ರಜಾಸತ್ತಾತ್ಮಕ ವಿರೋಧ ಪಕ್ಷಗಳು ಜಂಟಿಯಾಗಿ ನೀಡಿದ ಫೆಬ್ರವರಿ 23ರ 'ಭಾರತ್ ಬಚಾವೋ' ಕಾರ್ಯಕ್ರಮ ದೇಶದ ರಾಜಧಾನಿ ದೆಹಲಿಯಲ್ಲಿ ಅತ್ಯಂತ ಯಶಸ್ವಿಯಾಗಿ ನೆರವೇರಿತು.

ಭಾರತೀಯ ಜನತಾ ಪಕ್ಷವನ್ನು ಹೊರತುಪಡಿಸಿ ಸಿ.ಪಿ.ಐ.(ಎಂ) ಸಿ.ಪಿ.ಐ, ಜನತಾ, ಜನಮೋರ್ಚಾ, ಲೋಕದಳ, ಕಾಂಗ್ರೆಸ್(ಎಸ್)ಪಾರ್ವರ್ಡ್‌ಬ್ಲಾಕ್, ಕ್ರಾಂತಿ ಕಾರಿ ಸಮಾಜ ವಾದಿ ಪಕ್ಷಗಳ ಸಹಸ್ರಾರು ಕಾರ್ಯಕರ್ತರ ಬೃಹತ್ ರ‍್ಯಾಲಿ ದೆಹಲಿಯ ಪ್ರಮುಖ ಬೀದಿಗಳಲ್ಲಿ ಜನತೆಯ ಗಮನ ಸೆಳೆಯಿತು. ಭ್ರಷ್ಟಾಚಾರಿ ರಾಜೀವ್‌ಗಾಂಧಿ ಸರ್ಕಾರ ರಾಜೀನಾಮೆ ನೀಡಿ ಮಧ್ಯಂತರ ಚುನಾವಣೆಯನ್ನು ಎದುರಿಸಬೇಕೆಂದು, ಛಿದ್ರಕಾರಿ-ಪ್ರತ್ಯೇಕತಾವಾದಿ ಶಕ್ತಿಗಳಿಂದ ಭಾರತದ ಐಕ್ಯತೆ ಸಮಗ್ರತೆಯನ್ನು ಕಾಪಾಡುವಲ್ಲಿ ವಿಫಲವಾಗಿರುವ ರಾಜೀವ್ ಸರ್ಕಾರವನ್ನು ಕಿತ್ತೊಗೆದು ಭಾರತವನ್ನು ರಕ್ಷಿಸಬೇಕೆಂಬ ಒಕ್ಕೊರಳಿನ ಘೋಷಣೆಗಳು ಮೊಳಗಿದವು.

ಬೋಟ್ ಕ್ಲಬ್‌ನಲ್ಲಿ ಜರುಗಿದ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದ ಸರ್ವ ಪಕ್ಷಗಳ ಮುಖಂಡರು ಎಲ್ಲಾ ಕ್ಷೇತ್ರಗಳಲ್ಲಿಯೂ ಜನ ವಿಶ್ವಾಸ ಕಳೆದುಕೊಂಡ ರಾಜೀವ್‌ಗಾಂಧಿ ಚುನಾವಣೆ ಮೂಲಕ ಜನತೆಯಿಂದ ಹೊಸ ಆದೇಶ ಪಡೆಯಬೇಕೆಂದು, 13 ಅಂಶಗಳ ಪರ್ಯಾಯ ಧೋರಣೆಯ ಬೇಡಿಕೆಗಳಿಗಾಗಿ ಒಟ್ಟಾಗಿ ದುಡಿಯುವ ಹಾಗೂ ಇಡೀ ದೇಶದ ಜನತೆಯನ್ನು ಈ ಬೇಡಿಕೆಗಳ ಆಧಾರದಲ್ಲಿ ಅಣಿನೆರೆಸಿ ವ್ಯಾಪಕ ಪ್ರಚಾರ ಜಾಥ, ಸಾರ್ವಜನಿಕ ಸಭೆಗಳ ಮೂಲಕ ಎಲ್ಲಾ ಜನ ವಿಭಾಗಗಳ ಪೂರ್ಣ ಸಹಕಾರದೊಂದಿಗೆ, ಮಾರ್ಚ್ 15ರ ಭಾರತ್ ಬಂದ್ ಅನ್ನು ಸಂಪೂರ್ಣ ಯಶಸ್ವಿಗೊಳಿಸಲು ಕರೆ ನೀಡಿದರು.

ಬೆಂಗಳೂರು

ಬೆಂಗಳೂರಿನಲ್ಲಿ ಜನತಾ, ಸಿ.ಪಿ.ಐ (ಎಂ) ಮತ್ತು ಸಿ.ಪಿ ಐ. ಪಕ್ಷಗಳಜಿಲ್ಲಾ ಘಟಕಗಳ ಆಶ್ರಯದಲ್ಲಿ ಸಾರ್ವಜನಿಕ ಸಭೆಯೊಂದನ್ನು ಲಾಯಿತು. ಚಿಕ್ಕಲಾಲ್‌ಬಾಗ್ ಮತ್ತು ಮಲ್ಲೇಶ್ವರಂ ಮೈದಾನದಿಂದ ಸಿ.ಪಿ.ಐ.(ಎಂ) ಹಾಗೂಸಿಪಿಐನ ನೂರಾರುಕಾರ್ಯಕರ್ತರ ಮೆರವಣಿಗೆಗಳಲ್ಲಿ ಹೊರಟು ಶೇಷಾದ್ರಿಪುರಂ ನೆಹರೂ ಪಾರ್ಕಿಗೆ ಬಂದು ಸೇರಿದರು.

ಬೆಂಗಳೂರು ನಗರ ಜನತಾ ಪಕ್ಷದ ಅಧ್ಯಕ್ಷರಾದ ಶ್ರೀಎಂ.ಎಸ್.ನಾರಾಯಣರಾವ್‌ರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯನ್ನುದ್ದೇಶಿಸಿ ಸಿ.ಪಿ.ಐ. (ಎಂ) ರಾಜ್ಯ ಕಾರ್ಯದರ್ಶಿ ಕಾ||ಪಿ.ರಾಮಚಂದ್ರರಾವ್, ಜಿಲ್ಲಾ ಕಾರ್ಯದರ್ಶಿ ಕಾ||ಎಸ್. ಸೂರ್ಯನಾರಾಯಣರಾವ್ ಸಿ.ಪಿ.ಐ. ರಾಜ್ಯ ಮಂಡಳಿ ಕಾರ್ಯದರ್ಶಿ ಕಾ||ಎಂ.ಎಸ್.ಕೃಷ್ಣನ್, ಜಿಲ್ಲಾ ಸೆಕ್ರಟಾರಿಯೇಟ್ ಸದಸ್ಯರಾದ ಕಾ|| ಎಂ.ಸಿ.ವೆಂಕಟರಾವ್ ಮಾತನಾಡಿದರು. ಪ್ರಾರಂಭದಲ್ಲಿ ಕಾ||ಎಸ್.ಆರ್ ಆರಾಧ್ಯ ಸ್ವಾಗತಿಸಿ ಹ... ಗೋವಿಂದ್ ಧನ್ಯವಾದಗಳನ್ನು ಅರ್ಪಿಸಿದರು.

(ಜಿಲ್ಲೆಗಳ ವರದಿ ಮುಂದಿನ ವಾರ)

ಬೆಲೆಯೇರಿಕೆಗೆ ತುಪ್ಪ ಸುರಿವ ರೈಲ್ವೇ ಬಜೆಟ್

ಪ್ರಯಾಣ, ಸಾಗಣೆ, ಫ್ಲಾಟ್ ಫಾರಂ ಟಿಕೆಟ್ ಹೀಗೆ ಯಾವ ವಿಭಾಗವನ್ನು ಬಿಡದೆ ತೀವ್ರ ದರ ಏರಿಕೆಯ ಮೂಲಕ ಒಟ್ಟು 622 ಕೋಟಿ ರೂ. ಸಂಗ್ರಹಿಸಿಯೂ ಕೇವಲ 28 ಕೋಟಿ ರೂ. ಉಳಿತಾಯದ ರೈಲ್ವೇ ಬಜೆಟ್ಟನ್ನು ರೈಲ್ವೇ ಮಂತ್ರಿಗಳು ಮಂಡಿಸಿದ್ದಾರೆ ಈ ಬಾರಿಯ ದರ ಏರಿಕೆ ಹಿಂದೆಂದಿಗಿಂತಲೂ ವಿಪರೀತ ಹೆಚ್ಚು. ಇದು ಕಳೆದ ಮೂರು ವರ್ಷಗಳಲ್ಲಿ ಒಟ್ಟಾಗಿ ಮಾಡಿದ ದರ ಏರಿಕೆಗಿಂತಲೂ ಹೆಚ್ಚಾಗಿದೆ. ಕಳೆದ ವರ್ಷ ದರ ಏರಿಕೆಯಿಲ್ಲದೆ 69 ಕೋಟಿ ರೂ. ಉಳಿತಾಯದ ಬಜೆಟ್ ಮಂಡಿಸಲಾಗಿತ್ತು ಎಂಬುದರೊಡನೆ ಇದನ್ನು ಹೋಲಿಸಿದಾಗ ಜನತೆಯ ಮೇಲೆ ಈ ಬಾರಿಯ ರೈಲ್ವೇ ಬಜೆಟ್ ಹೇರಿರುವ ಹೊರೆಯೆಷ್ಟು ಎಂಬುದನ್ನು ಅಂದಾಜು ಮಾಡಿಕೊಳ್ಳಬಹುದು.

ಯಥಾ ಪ್ರಕಾರ ಈ ಬಾರಿಯೂ ರೈಲ್ವೇ ಬಜೆಟ್ ಕರ್ನಾಟಕ್ಕೆ ಕೈಕೊಟ್ಟಿದೆ. ಹೊಸ ಮಾರ್ಗ ಯಾವುದೂ ಇಲ್ಲ. ಮಂಗಳೂರು-ಗೋವ ಕರಾವಳಿ ಸಂಪರ್ಕ ಮಾರ್ಗದ ಸರ್ವೆ ಕೆಲಸ ಮುಗಿದಿವೆ. ಆದರೆ ಮುಂದೇನು ಎಂಬ ಬಗ್ಗೆ ಪ್ರಸ್ತಾಪವಿಲ್ಲ. 26.45 ಕೋಟಿ ರೂ. ಅಂದಾಜು ವೆಚ್ಚದ ಮದ್ರಾಸ್-ಮೈಸೂರ್ ಮೈಕ್ರೋವೇವ್ ಬದಲಾವಣೆಗೆ ಕೇವಲ 1.94 ಕೋಟಿ ರೂ, 3.1 ಕೋಟಿ ರೂ. ವೆಚ್ಚದ ಕೆ.ಆರ್.ಪುರ ಬೈಯಪ್ಪನಹಳ್ಳಿ ಮಧ್ಯೆ ಕಾಮಗಾರಿಗಳಿಗೆ ಕೇವಲ ಒಂದು ಲಕ್ಷ ರೂ, 59 ಕೋಟಿ ರೂ. ವೆಚ್ಚದ ಮೈಸೂರು-ಬೆಂಗಳೂರು ಬ್ರಾಡ್‌ಗೇಜ್ ಪರಿವತನೆಗೆ 6ಕೋಟಿ ರೂ, ಜೋಲಾರಪೆಟೆ ಬೆಂಗಳೂರ ವಿದ್ಯುದೀಕರಣದ ಒಟ್ಟು 30.54 ಕೋಟಿ ರೂ.ಗಳಲ್ಲಿ 4.37 ಕೋಟಿ ರೂಪಾಯಿ, ಶಹಾಬಾದ್-ಕಲ್ಬುರ್ಗಿ ಮಾರ್ಗ ಇಮ್ಮಡಿಗೊಳಿಸುವ 13.56 ಕೋಟಿ ರೂ. ಯೋಜನೆಗೆ 5.01 ಕೋಟಿ (ಇದು ಈ ವರ್ಷ ಮುಗಿಯಬೇಕಾದ ಯೋಜನೆ) ಹಾಗೂ

(8 ನೇ ಪುಟನೋಡಿ)

ಉಪರಾಷ್ಟ್ರಪತಿಯವರೊಂದಿಗೆ ಕಾಂಗ್ರೆ ಅಸಭ್ಯ ವರ್ತನೆ

ಬಜೆಟ್ ಅಧಿವೇಶನದ ಎರಡನೇ ದಿನ ದೇಶಾದ್ಯಂತ ರೈತರು, ಕಾರ್ಮಿಕರು ಹಾಗೂ ಇತರ ಪ್ರಜಾಪ್ರಭುತ್ವವಾದೀ ಜನವಿಭಾಗಗಳು ರಾಜೀವಗಾಂಧಿ ಸರ್ಕಾರದ ಜನವಿರೋಧಿ, ಪ್ರಜಾತಂತ್ರ-ವಿರೋಧಿ ನಿಲುವುಗಳನ್ನು ಖಂಡಿಸುತ್ತಿದ್ದಾಗ ರಾಜ್ಯ ಸಭೆಯಲ್ಲಿ ಕಾಂಗ್ರೆಸ್ (ಐ) ಎಂ.ಪಿ.ಗಳು, ಮಂತ್ರಿಗಳು, ಎಲ್ಲಕ್ಕೂ ಮಿಗಿಲಾಗಿ ಅವರ "ಮುಖಂಡ" ತಮ್ಮ ಸರ್ವಾಧಿಕಾರೀಪ್ರವೃತ್ತಿಯ ಇನ್ನೊಂದು ನಾಚಿಕೆಗೇಡೀ ಉದಾಹರಣೆ ಪ್ರಸ್ತುತ ಪಡಿಸಿದರು. ತಮ್ಮ ಸರ್ವಾಧಿಕಾರೀ ಪ್ರವೃತ್ತಿಗೆ ಅಡ್ಡಿಯಾಗುವ ಎಲ್ಲಾ ಸಂಸದೀಯ ನೀತಿಗಳನ್ನು ಗಾಳಿಗೆ ತೂರುವುದು ಮಾತ್ರವಲ್ಲ, ತಮ್ಮದೇ ಪಕ್ಷದ ಹಿರಿಯ ಮುಖಂಡರೊಬ್ಬರ ನೇರ ನಡವಳಿಕೆಯನ್ನು ಸಹಿಸಲು ಕೂಡಾ ಅವರು ಸಿದ್ಧರಿಲ್ಲ ಎಂದು ಕಾಂಗ್ರೆಸ್‌ನವರು ತೋರಿಸಿಕೊಟ್ಟಿದ್ದಾರೆ.

ತೆಲುಗುದೇಶಂ ಸದಸ್ಯ ಪಿ ಉಪೇಂದ್ರ ಆಂಧ್ರಪ್ರದೇಶ ರಾಜ್ಯಪಾಲರು ಮಿತಿ ಮೀರಿ ಖರ್ಚುಮಾಡಿರುವುದರ ಬಗ್ಗೆ ಪ್ರಸ್ತಾಪ ಮಾಡಲು ರಾಜ್ಯ ಸಭೆಯ ಅಧ್ಯಕ್ಷ ಹಾಗೂ ಉಪರಾಷ್ಟ್ರಪತಿ ಶಂಕರದಯಾಳ ಶರ್ಮಾ ಅವಕಾಶ ನೀಡಿದ್ದರಿಂದ ಕುಪಿತರಾದ ಪ್ರಧಾನ ಮಂತ್ರಿಯವರ ಕುಮ್ಮಕ್ಕಿನಿಂದ ಇತ್ತೀಚೆಗೆ ತ್ರಿಪುರಾದಲ್ಲಿ ತಮ್ಮ ಕೈಚಳಕ

(8 ನೇ ಪುಟನೋಡಿ)

ಕೇಂದ್ರ ಸರಕಾರದ ಕೇಂದ್ರೀಕರಣ ನೀತಿಯ ವಿರುದ್ಧ

ಕರ್ನಾಟಕದ ಜನತೆಯ ಮೂರು ಪ್ರಶ್ನೆಗಳು

ಇತ್ತೀಚಿನ ಜನಗಳಲ್ಲಿ ಮೂರು ಪ್ರಶ್ನೆಗಳು ಕರ್ನಾಟಕದ ಜನತೆಯ ಮುಂದೆ ಮತ್ತೆ ಮತ್ತೆ ಇಡಲಾಗಿವೆ, ಜನರ ವಿವಿಧ ವಿಭಾಗಗಳ ಪ್ರತಿನಿಧಿಗಳಿಂದ ಚಳುವಳಿಗಳ ಮೂಲಕ ಎತ್ತಲ್ಪಟ್ಟಿವೆ. ಜನ ಸಮುದಾಯದ ಬೆಂಬಲವನ್ನು ಗಳಿಸಿವೆ. ಕರ್ನಾಟಕದ ರೈಲು ಅಭಿವೃದ್ಧಿ, ಮಂಗಳೂರು ತೈಲಾಗಾರ ಹಾಗೂ ದೂರದರ್ಶನದಲ್ಲಿ ಪ್ರಾದೇಶಿಕ ಭಾಷೆಗಳ ಪ್ರಾಧಾನ್ಯತೆ-ಈ ಮೂರು ಪ್ರಶ್ನೆಗಳು ಕರ್ನಾಟಕದ ಜನರ ಜೀವನದ ಪ್ರಶ್ನೆಗಳಾಗಿ ಪರಿಣಮಿಸಿವೆ. ಈ ಪ್ರಶ್ನೆಗಳು ನಮ್ಮ ಪಕ್ಷದ ಕಾರ್ಯಕ್ರಮ ಸಾರುವಂತೆ-

ಒಂದು ಕಡೆ "ಹಿರಿಬಂಡವಾಳಶಾಹಿ ಮತ್ತೊಂದು ಕಡೆ ಈ ರಾಜ್ಯ ಅಥವಾ ಮತ್ತೊಂದು ರಾಜ್ಯದ ಬಂಡವಾಳಶಾಹಿಗಳೂ ಸೇರಿದಂತೆ ಇಡೀ ಜನತೆಯ ನಡುವೆ ಬೆಳೆಯುತ್ತಿರುವ ಆಳವಾದ ವೈರುಧ್ಯಗಳು"

ಇವುಗಳಲ್ಲಿ ಮೊದಲ ಪ್ರಾಮುಖ್ಯದ ಪ್ರಶ್ನೆ ರೈಲ್ವೆ ಅಭಿವೃದ್ಧಿ ಎಂಬುದರಲ್ಲಿ ಸಂಶಯವಿಲ್ಲ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಜುಲೈ 85ರಲ್ಲಿಯೇ ಕೇಂದ್ರ ಸರ್ಕಾರದಿಂದ ರಾಜ್ಯದ ಜನತೆಗೆ ಆಗುತ್ತಿರುವ ಅನ್ಯಾಯವನ್ನು ಪ್ರತಿಭಟಿಸಿ ರೈಲ್ವೆ, ತೈಲಾಗಾರ, ಉಕ್ಕಿನ ಕಾರ್ಖಾನೆಗಳ ಪ್ರಶ್ನೆಯನ್ನು ಎತ್ತಿ ಕರ್ನಾಟಕ ವ್ಯಾಪಿ ಚಳುವಳಿಯನ್ನು ಸಂಘಟಿಸಿತು. ಅದರ ಮುಂದುವರಿಕೆಯಾಗಿ ಪಕ್ಷ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತೆ ಫೆ. 14-15ರಂದು ಕೊಂಕಣ ರೈಲ್ವೆ ಹಾಗೂ

(8 ನೇ ಪುಟ ನೋಡಿ)

107 ದಿನ ಮೀರಿ ಮುಂದುವರಿದ

ಐ. ಟಿ. ಸಿ. ಕಾರ್ಮಿಕರ ಮುಷ್ಕರ

ಐ.ಟಿ.ಸಿ. ಕಾರ್ಮಿಕರ ಧೀರೋದಾತ್ತ ಮುಷ್ಕರ 107 ದಿನಗಳನ್ನು ಮೀರಿದಾಗ ಮುಷ್ಕರವನ್ನು ಹಿಂತೆಗೆದುಕೊಳ್ಳುವ ತೀರ್ಮಾನವನ್ನು ತೆಗೆದುಕೊಂಡ ಐ.ಟಿ.ಸಿ. ಕಾರ್ಮಿಕರ ಸರ್ವ ಸದಸ್ಯರ ಸಭೆ ಅಂಗೀಕರಿಸಿದ ನಿರ್ಣಯವನ್ನು ಈ ಕೆಳಗೆ ನೀಡಲಾಗಿದೆ. ಮುಷ್ಕರವನ್ನು ಹಿಂತೆಗೆದುಕೊಂಡು ಕಾರಖಾನೆಗೆ ಕೆಲಸಕ್ಕೆ ಹೋದ ಕಾರ್ಮಿಕರಲ್ಲಿ 71 ಜನ ಕಾರ್ಮಿಕ ಮುಂದಾಳುಗಳನ್ನು ಕೆಲಸಕ್ಕೆ ತೆಗೆದುಕೊಳ್ಳುವುದಿಲ್ಲವೆಂದು ಆಡಳಿತ ವರ್ಗ ನಿರಾಕರಿಸಿದೆ. ಅನೇಕ ಕಾರ್ಮಿಕ ಸಂಘದ ಪದಾಧಿಕಾರಿಗಳು ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಪ್ರಮುಖ ಕಾರ್ಯಕರ್ತರು ಸೇರಿರುವ ಈ 71 ಮಂದಿಯನ್ನು ಇವರ ಮೇಲೆ ಪೋಲೀಸರ ಎಫ್.ಐ.ಆರ್. ಇದೆ ಎನ್ನುವ ನೆಪದ ಮೇಲೆ ಹೊರಗಿಟ್ಟರೆ ಕಾರಖಾನೆಯ ಒಳಗೆ ಬಂದ ಉಳಿದ ಕಾರ್ಮಿಕರಿಗೆ ವಿಷ ಬೀಜ ಬಿತ್ತಿ ಹಿಂದೆಲ್ಲ ಮಾಡಿದಂತೆ ಕಾರ್ಮಿಕ ಸಂಘವನ್ನು ಒಡೆಯಬಹುದು, ತಮ್ಮ ಕೈಗೊಂಬೆ ಕಾರ್ಮಿಕ ಸಂಘವೊಂದನ್ನು ತಲೆಯ ಮೇಲೆ ಹೊರಬಹುದು ಎಂಬುದು ಆಡಳಿತ ವರ್ಗದ ಸಂಚು. ಇದನ್ನು ಅರ್ಥಮಾಡಿಕೊಂಡ ಹಿಂದಿನ ದಿನ ಸರ್ವ ಸಭೆಯಲ್ಲಿ ಮುಷ್ಕರ ಹಿಂತೆಗೆಯಲು ತೀರ್ಮಾನಿಸಿದ್ದ ಅನೇಕ ಕಾರ್ಮಿಕರು ಮತ್ತೆ ಮುಷ್ಕರ ಮುಂದುವರೆಸಲು ಆಡಳಿತ ವರ್ಗದ ಈ "ಭಾಗಶಃ ಲಾಕೌಟ್" ವಿರುದ್ಧ ಪ್ರತಿಭಟಿಸಲು ತೀರ್ಮಾನಿಸಿದರು. ಅಲ್ಲದೇ ಅದೇ ದಿನ (22.2.88) ವಿಧಾನ ಸೌಧಕ್ಕೆ ತೆರಳಿ ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಿದರು. ಮುಖ್ಯಮಂತ್ರಿಗಳ ಮಧ್ಯ ಪ್ರವೇಶವನ್ನು ಕೋರಿದರು.

ಸರ್ವ ಸಭೆಯ ನಿರ್ಣಯ

ಐ.ಟಿ.ಸಿ. ಕಾರ್ಮಿಕರ ಸರ್ವಸದಸ್ಯರ ಸಭೆ ಎಲ್ಲಾ ಬೆದರಿಕೆ, ಚಾರ್ಜ್ ಶೀಟ್, ಅವಮಾನತು ಪೋಲಿಸರ ದಬ್ಬಾಳಿಕೆ, ಹಣದ ಆಸೆಗಳನ್ನೆಲ್ಲಾ ಎದುರಿಸಿ ಕಾರ್ಮಿಕರು ವ್ಯಕ್ತಪಡಿಸಿದ ಐಕ್ಯತೆ ಹಾಗೂ ದೃಢ ನಿರ್ಧಾರವನ್ನು ಅಭಿನಂದಿಸುತ್ತದೆ.

ಈ ಸರ್ವಸದಸ್ಯರ ಸಭೆಯು ಕಾರ್ಮಿಕ ಸಚಿವರ ಒಪ್ಪಿಗೆಯನ್ನು ಕೂಡ ಪಡೆಯದೇ ಮುಷ್ಕರದ ಬಹಿಷ್ಕಾರ ಮಾಡಿದ ಮತ್ತು ಈ ವಿವಾದವನ್ನು ಬಗೆಹರಿಸದೆ ನ್ಯಾಯಾಲಯದ ಮುಂದೆ ಕಳುಹಿಸಿದ್ದ ಕಾರ್ಮಿಕ ಇಲಾಖೆಯ ಧೋರಣೆಯನ್ನು ಖಂಡಿಸುತ್ತದೆ.

ಈ ಸಭೆಯು ಆಡಳಿತವರ್ಗವೂ ಹಿತ ರಕ್ಷಣೆಗಾಗಿ ಕಾರ್ಮಿಕ ವಿವಾದದಲ್ಲಿ ಪೋಲೀಸರ ಬಳಕೆ ಮಾಡುವ ಜನತಾ ಸರ್ಕಾರದ ಪೋಲೀಸ್ ನೀತಿಯನ್ನು ಖಂಡಿಸುತ್ತದೆ.

ಈ ಸಭೆಯು ಆಡಳಿತ ವರ್ಗವು ಮುಷ್ಕರವನ್ನು ಮುರಿಯಲು ತಮ್ಮ ಖಜಾನೆಯನ್ನು ಬಿಚ್ಚಿದ ರೀತಿಯನ್ನು, ಕಾರ್ಮಿಕ ಇಲಾಖೆಯನ್ನು ದುರುಪಯೋಗ ಪಡಿಸಿಕೊಂಡ ರೀತಿಯನ್ನು ಅಖಿಲ ಭಾರತ ಮುಷ್ಕರ ಎದ್ದು ಬರದಂತೆ ಕೈಗೊಂಡ ಹಣ ಬಿಚ್ಚುವ ಕ್ರಮಗಳನ್ನು ಖಂಡಿಸುತ್ತದೆ.

ಜನತಾ ಸರ್ಕಾರವು ಆಡಳಿತ ವರ್ಗವನ್ನು ಸಂಧಾನದ ಮೇಜಿಗೆ ಬರುವಂತೆ ಒತ್ತಾಯಿಸದೆ, ಅಸಹಾಯಕತೆ ವ್ಯಕ್ತಪಡಿಸಿದ್ದನ್ನು, ಆದರೆ ಕಾರ್ಮಿಕರಿಗೆ ತೊಂದರೆ ನೀಡಲು ಪೋಲೀಸರನ್ನು ನೆರವು ನೀಡಿದ್ದನ್ನು ಗಮನಕ್ಕೆ ತೆಗೆದುಕೊಳ್ಳುತ್ತದೆ.

ಈ ಸಭೆಯು ಉತ್ಪಾದಕೆ ಆಧಾರದ ಬೋನಸ್, ಕಂಪ್ಯೂಟರೀಕರಣ ಆಧುನಿಕ ಯಂತ್ರಗಳ ಉಪಯೋಗ ಮೊದಲಾದುವುಗಳ ವಿರುದ್ಧ ಹೂಡಿದ ಈ ತತ್ವಬದ್ಧ ಹೋರಾಟದ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳದಿರುವ ಎ.ಐ.ಟಿ.ಯು.ಸಿ. ಹಾಗೂ ಸಾರ್ವಜನಿಕ ಉದ್ದಿಮೆಗಳ ಇತರ ಸಂಘಗಳ ಧೋರಣೆಯನ್ನು ಗಮನಕ್ಕೆ ತೆಗೆದುಕೊಳ್ಳುತ್ತದೆ.

ಇವೆಲ್ಲವನ್ನೂ ಗಮನಿಸಿದ ಸರ್ವ ಸದಸ್ಯರ ಸಭೆಯು ಹೋರಾಟದ ರೂಪವನ್ನು ಬದಲಾಯಿಸಬೇಕೆಂಬ, ಕೆಲಸಕ್ಕೆ ಹಾಜರಾಗಿ ಕಾರ್ಖಾನೆಯ ಒಳ ಹೊರಗೆ ಹಾಗೂ ನ್ಯಾಯಾಲಯದಲ್ಲಿ ಹೋರಾಟವನ್ನು ಮುಂದುವರಿಸಬೇಕೆಂದು ಸಂಘದ ಕಾರ್ಯಕಾರಿ ಸಮಿತಿ ಹಾಗೂ ಸಂಘರ್ಷ ಸಮಿತಿಗಳು ಮಾಡಿದ ತೀರ್ಮಾನಕ್ಕೆ ಒಪ್ಪಿಗೆ ನೀಡುತ್ತದೆ.

ಸಿ.ಐ.ಟಿ.ಯು. ಸಂಘಗಳಿಂದ, ಸಿ.ಐ.ಟಿ.ಯು. ಪ್ರಧಾನ ಕಾರ್ಯದರ್ಶಿ ಸಮರ್ ಮುಖರ್ಜಿ ಎಂ.ಪಿ.ಯವರು, ಮೈಕೇಲ್ ಫರ್ನಾಂಡಿಸ್ ಹಾಗೂ ಸಿ.ಐ.ಟಿ.ಯು, ರೈತ ಸಂಘ ಮಹಿಳಾ ಸಂಘಟನೆ ಹಾಗೂ ವಿದ್ಯಾರ್ಥಿ ಯುವಜನ ಮತ್ತಿತರ ಸಂಘಗಳು ಮಾಡಿದ ಸಹಾಯವನ್ನು ಮುಖ್ಯವಾಗಿ ಐ.ಟಿ.ಸಿ. ಕಾರ್ಮಿಕರ ಕುಟುಂಬದ ಹೆಂಗಸರ ಮಕ್ಕಳು ನೀಡಿದ ಬೆಂಬಲ ಹಾಗೂ ಸೌಹಾರ್ದತೆಯನ್ನು ದಾಖಲು ಮಾಡಬಯಸುತ್ತದೆ. ಸಭೆಯು ಸೌಹಾರ್ದ ಸಮಿತಿಯ ಸಂಚಾಲಕರಾಗಿ ಕೆಲಸ ಮಾಡಿದ ಕಾಂ. ವೀರಾಸ್ವಾಮಿಯವರಿಗೆ ವಂದನೆ ಸಲ್ಲಿಸುತ್ತದೆ.

ಕಾರ್ಮಿಕ ಸಚಿವ ಎಸ್.ಕೆ. ಕಾಂತರವರು ಸಂಘಕ್ಕೆ ಪತ್ರಬರೆದು ಸರ್ಕಾರವು ಐ.ಟಿ.ಸಿ. ಕಾರ್ಮಿಕರಿಗೆ ಲಾಭದ ಭಾಗವಾಗಿ ಬೋನಸ್ ದೊರಕಿಸಲು ಕ್ರಮಗಳನ್ನು ಕೈಗೊಳ್ಳುತ್ತದೆ ಎಂದು ಭರವಸೆ ನೀಡಿದ್ದರ ಬಗ್ಗೆ ತೃಪ್ತಿ ವ್ಯಕ್ತಪಡಿಸುತ್ತದೆ.

ಈ ಸರ್ವ ಸದಸ್ಯರ ಸಭೆಯು ಐ.ಟಿ.ಸಿ. ಆಡಳಿತ ವರ್ಗದ ಕಾರ್ಮಿಕ ವಿರೋಧಿ ಧೋರಣೆಯನ್ನು ಖಂಡಿಸುತ್ತಾ ಈಗಲಾದರೂ ತಮ್ಮ ನಿಲುವನ್ನು ಬದಲಾಯಿಸಿ ಸಂಧಾನದ ಮೂಲಕ ಒಪ್ಪಂದಕ್ಕೆ ಬರಬೇಕೆಂದು ಕಾರ್ಮಿಕರ ವಿರುದ್ಧ ಕೈಗೊಂಡ ಎಲ್ಲಾ ಶಿಸ್ತಿನ ಕ್ರಮವನ್ನು ಹಿಂದೆಗೆಯಬೇಕೆಂದು ಒತ್ತಾಯಿಸುತ್ತದೆ.

ತಮ್ಮ ಪರೀಕ್ಷೆಯ ಈ ಗಳಿಗೆಯಲ್ಲಿ ಎಲ್ಲಾ ಕಾರ್ಮಿಕರೂ ಒಂದಾಗಿ ನಿಂತು ಹೆಚ್ಚಿನ ಶಕ್ತಿಯಿಂದ ಹೋರಾಟವನ್ನು ಮುಂದುವರೆಸಬೇಕೆಂದು ಕರೆ ನೀಡುತ್ತದೆ. ಈ ನಿರ್ಣಯವನ್ನು ಕಾರ್ಮಿಕ ವಿ.ಟಿ. ಭಾಸ್ಕರ ಮಂಡಿಸಿದರೆ ವೈ. ರಾಜ ಅನುಮೋದಿಸಿದರು.

ಡಿ. ವೈ. ಎಫ್. ಐ. ಕಾರ್ಯಕರ್ತರಿಂದ ರಸ್ತೆ ರೋಖೋ

ಮೊಳಕಾಲ್ಮೂರು ತಾಲ್ಲೋಕಿನ ರಾಂಪುರದ ತಮ್ಮೇನಹಳ್ಳಿಯಲ್ಲಿ ಫೆ.15 ರಂದು ಡಿ.ವೈ.ಎಫ್.ಐ. ಕಾರ್ಯಕರ್ತರು ಹಲವಾರು ಸ್ಥಳೀಯ ಸಮಸ್ಯೆಗಳ ಪರಿಹಾರಕ್ಕಾಗಿ ಒತ್ತಾಯಿಸಿ ನಡೆಸಿದ ರಸ್ತೆ ತಡೆ ಚಳುವಳಿ ಯಶಸ್ವಿಯಾಗಿ ಜರುಗಿತು. ಬಸ್ಸು, ಲಾರಿ ಮತ್ತಿತರ ವಾಹನ ಸಂಚಾರವನ್ನು ಎರಡು ಗಂಟೆಗಳ ಕಾಲ ತಡೆ ಹಿಡಿದು ಅಸ್ತವ್ಯಸ್ತಗೊಳಿಸಿದ ಕೂಡಲೇ ಸ್ಥಳಕ್ಕೆ ಧಾವಿಸಿ ಬಂದ ಪೋಲೀಸ್ ಅಧಿಕಾರಿಗಳ ಆಶ್ವಾಸನೆ ಮೇರೆಗೆ ರಸ್ತೆ ತಡೆ ಹಿಂತೆಗೆದುಕೊಳ್ಳಲಾಯಿತು.

ರಾಂಪುರ ಮತ್ತು ತಮ್ಮೇನಹಳ್ಳಿ ಆಸ್ಪತ್ರೆಗೆ ಮಹಿಳಾ ವೈದ್ಯರ ನೇಮಕ, ನಿವೇಶನ ರಹಿತರಿಗೆ ನಿವೇಶನ, ನ್ಯಾಯಬೆಲೆ ಅಂಗಡಿ, ಎಲ್ಲರಿಗೂ ಹಸಿರು ಕಾರ್ಡು ವಿತರಣೆ, ಗ್ರಾಮಾಂತರ ಪ್ರದೇಶಕ್ಕೆ ಬಸ್ ಸೌಲಭ್ಯ, ವಯಸ್ಕ ಶಿಕ್ಷಣಕೇಂದ್ರ ಸ್ಥಾಪನೆಯಂತಹ ಬೇಡಿಕೆಗಾಗಿ ನಡೆದ ಚಳುವಳಿಯ ನೇತೃತ್ವವನ್ನು ಡಿ.ವೈ.ಎಫ್.ಐ. ರಾಜ್ಯ ಸಮಿತಿ ಸದಸ್ಯ ಕಾ||ಎ.ಜಿ.ಗಂಗಾಧರ, ಸ್ಥಳೀಯ ಸಂಚಾಲಕ ಟಿ.ಮಲ್ಲಿಕಾರ್ಜುನ, ಸಹ ಸಂಚಾಲಕ ಹೆಚ್.ಹನುಮಂತರೆಡ್ಡಿಯವರು ವಹಿಸಿದ್ದರು.

ಫೆಬ್ರವರಿ 22 ರಂದು ಮೊಳಕಾಲ್ಮೂರು ತಾಲೋಕಿನ ರಾಂಪುರದಲ್ಲಿ ಡಿ.ವೈ.ಎಫ್.ಐ 200ಮಂದಿ ಕಾರ್ಯಕರ್ತರು ಇತ್ತೀಚೆಗೆ ಬೆಂಡಿಗೇರಿ, ತತ್ತೂರು ಮತ್ತಿತರ ಕಡೆ ಹರಿಜನರಿಗೆ ಮಲತಿನ್ನಿಸಿದ ಪ್ರಕರಣವನ್ನು ಖಂಡಿಸಿ ಪ್ರತಿಭಟನಾ ಮೆರವಣಿಗೆ ನಡೆಸಿದರು. ನಂತರ ನಡೆದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಎಸ್.ಎಫ್.ಐ. ಜಿಲ್ಲಾ ಸಹ ಕಾರ್ಯದರ್ಶಿ ಕಾ||ಡಿ.ಎ.ಮಲಿಯಪ್ಪ, ರಾಂಪುರ ಡಿ.ವೈ.ಎಫ್.ಐ. ಅಧ್ಯಕ್ಷ ಕಾ||ಗೋವಿಂದರಾಜ್, ನಾಗಸಮುದ್ರ ಕಾರ್ಯದರ್ಶಿ ರಾಮಾಂಜನೇಯ ರಾಜ್ಯ ಸಮಿತಿ ಸದಸ್ಯ ಕಾ|| ಎ.ಜಿ.ಗಂಗಾಧರ ಮಾತನಾಡಿ ಮಲತಿನ್ನಿಸಿದವರಿಗೆ ಉಗ್ರ ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಿದರು.

ಈ ಸಭೆಯಲ್ಲಿ ಮಾರ್ಚ್ 15ರ ಭಾರತ್ ಬಂದ್ ಯಶಸ್ವಿಗೊಳಿಸಲು ಪ್ರತಿಜ್ಞೆ ಸ್ವೀಕರಿಸಲಾಯಿತು.

ಐ. ಟಿ. ಸಿ. ಸಮಸ್ಯೆಯನ್ನು ಕೂಡಲೇ ಬಗೆಹರಿಸಿ

– ಕಾಂ. ಸಮರ್ ಮುಖರ್ಜಿ

ಇನ್ನೂ ಬಗೆಹರಿಯದ ಐ.ಟಿ.ಸಿ. ಸಮಸ್ಯೆಯನ್ನು ಬಗೆ ಹರಿಸಬೇಕೆಂದು ಸಿ.ಐ.ಟಿ.ಯು.ವಿನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಗಳೂ ಸಂಸದೀಯ ತಂಡದ ನಾಯಕರೂ ಆದ ಕಾಂ. ಸಮರ ಮುಖರ್ಜಿಯವರು ಮುಖ್ಯ ಮಂತ್ರಿಗಳಿಗೆ ಪತ್ರ ಬರೆದು ಐ.ಟಿ.ಸಿ. ಸಮಸ್ಯೆಯನ್ನು ಬಗೆಹರಿಸಲು ಒತ್ತಾಯಿಸಿದ್ದಾರೆ. ಅವರ ಪತ್ರದ ಪೂರ್ಣ ಪಾಠ ಇಲ್ಲಿದೆ.

ಪ್ರಿಯ ಶ್ರೀ ಹೆಗಡೆಯವರೆ,

ಐ.ಟಿ.ಸಿ. ಬೆಂಗಳೂರು ಘಟಕದಲ್ಲಿ ನಡೆದಿರುವ ದೀರ್ಘ ಕಾಲದ ಹೋರಾಟದತ್ತ ನಿಮ್ಮ ಗಮನ ಸೆಳೆಯ ಬಯಸುತ್ತೇನೆ. ಈ ಬಗ್ಗೆ ನೀವು ಜನವರಿ 30ರಂದು ದೆಹಲಿಯಲ್ಲಿದ್ದಾಗ ನಾನೇ ವ್ಯಕ್ತಿಶಃ ಮಾತನಾಡಬೇಕೆಂದು ಬಯಸಿದ್ದೆ. ಆದರೆ ನಾನು ಅಂದು ಆಸ್ಪತ್ರೆಯಲ್ಲಿದ್ದುದರಿಂದ ನಿಮ್ಮನ್ನು ಭೇಟಿ ಮಾಡಲಾಗಲಿಲ್ಲ.

ಅಖಿಲ ಭಾರತ ಐ.ಟಿ.ಸಿ. ಕಾರ್ಮಿಕರ ಒಕ್ಕೂಟಕ್ಕೆ ಸೇರಿರುವ, ಸಿ.ಐ.ಟಿ.ಯು.ವಿಗೆ ನೊಂದಾಯಿತವಾದ ಐ.ಟಿ.ಸಿ. ಕಾರ್ಮಿಕ ಸಂಘವೊಂದರಲ್ಲಿ ಬೆಂಗಳೂರಿನ ಕಾರ್ಮಿಕರು ಸಂಘಟಿತರಾಗಿದ್ದಾರೆಂದು ನಿಮ್ಮ ಅರಿವಿಗೆ ಬಂದಿರಬಹುದು. ಆಡಳಿತ ವರ್ಗದ ಹಠಮಾರಿತನದ ಧೋರಣೆಯಿಂದಾಗಿ ಈ ಮುಷ್ಕರವು ಕಾರ್ಮಿಕರ ಮೇಲೆ ಹೇರಲ್ಪಟ್ಟಿತು. ಬೋನಸ್ ಕಾಯ್ದೆಯಂತೆ ಲಾಭದ ಭಾಗವಾಗಿ ಬೋನಸ್ ನೀಡಲು ನಿರಾಕರಣೆ, ಉನ್ನತ ತಂತ್ರಜ್ಞಾನದ ಯಂತ್ರಗಳು, ಕಂಪ್ಯೂಟರೀಕರಣವನ್ನು ಹೇರುವುದು ಹಾಗೂ ವರ್ಷವೆಲ್ಲಾ ಕಾಲವೂ ನಡೆಯಬೇಕಾದ ಕೆಲಸವನ್ನು ಕಾಂಟ್ರಾಕ್ಟ್ ಕಾರ್ಮಿಕರಿಂದ ಮಾಡಿಸುವುದು ಇವುಗಳಿಂದಾಗಿ ಮುಷ್ಕರ ತೊಡಗಿತು.

ಬೋನಸ್ ಕಾಯ್ದೆಯ ಪ್ರಕಾರ ಬೋನಸ್ ನೀಡಲು ನಿರಾಕರಿಸುವುದು ಅಕ್ರಮವೆಂದು ನೀವು ಒಪ್ಪುತೀರಿ. ಇನ್ನು ಉನ್ನತ ತಂತ್ರಜ್ಞಾನದ ಯಂತ್ರಗಳ ಮತ್ತು ಕಂಪ್ಯೂಟರೀಕರಣಗಳ ವಿಷಯದಲ್ಲಿ ಕಾರ್ಮಿಕರ ಹಿಂದಿನ ಅನುಭವ ನೋಡಿದರೆ ಅವುಗಳಿಗೆ ಕಾರ್ಮಿಕರು ವಿರೋಧಿಸುವುದು ನ್ಯಾಯ ಸಮ್ಮತವೆಂದು ಕಾಣುತ್ತದೆ. ಮೂರು ವರ್ಷಗಳ ಹಿಂದೆ ಆಂಧ್ರ ಪ್ರದೇಶದ ಐ.ಎಲ್.ಟಿ.ಡಿ. ವಿಭಾಗದಲ್ಲಿ ಇಂತಹ ಯಂತ್ರಗಳನ್ನು ಆಡಳಿತ ವರ್ಗ ಪ್ರವೇಶಗೊಳಿಸಿದಾಗ ಸಾವಿರಾರು ಕಾರ್ಮಿಕರನ್ನು ರಿಟ್ರೆಂಚ್ ಮಾಡಲಾಯಿತು. ಬೆಂಗಳೂರಿನಲ್ಲಿ ಇನ್ನೂ ಹೆಚ್ಚು ತಂತ್ರಜ್ಞಾನದ ಯಂತ್ರವನ್ನು ಸ್ಥಾಪಿಸಲು ಆಡಳಿತ ವರ್ಗ ಯೋಜನೆ ಹಾಕಿದೆ. ಈ ಯಂತ್ರಗಳು ಈಗ ಉತ್ಪಾದನೆಯಾಗುವ ನಿಮಿಷಕ್ಕೆ 3000 ಸಿಗರೇಟುಗಳ ಬದಲಾಗಿ 8000 ಸಿಗರೇಟುಗಳನ್ನು ಉತ್ಪಾದಿಸಲು ಶಕ್ತವಾಗಿವೆ. ಇದು ದೊಡ್ಡ ಸಂಖ್ಯೆಯಲ್ಲಿ ಕಾರ್ಮಿಕರನ್ನು ನಿರುಪಯುಕ್ತಗೊಳಿಸುತ್ತದೆ. ಅಲ್ಲದೆ ಈಗಾಗಲೇ ವರ್ಷವೆಲ್ಲಾ ಇರುವ ಕೆಲಸಗಳನ್ನೂ ಕಂಟ್ರಾಕ್ಟರುಗಳಿಗೆ ವಹಿಸುತ್ತಿರುವುದರಿಂದ ದೊಡ್ಡ ಸಂಖ್ಯೆಯ ಕ್ರಮಬದ್ಧ ಕಾರ್ಮಿಕರಿಗೆ ತೊಂದರೆಯಾಗಿದೆ.

ಈ ಮೇಲೆ ವಿವರಿಸಿದ ಸನ್ನಿವೇಶದಲ್ಲಿ ಕಾರ್ಮಿಕರ ಬೇಡಿಕೆಗಳು ನ್ಯಾಯ ಬದ್ಧವಾಗಿವೆಯೆಂದು ನೀವು ಒಪ್ಪುತ್ತೀರೆಂದು ಭಾವಿಸುತ್ತೇನೆ. ಈ ವಿಷಯಗಳಿಗೆ ಸಂಬಂಧಿಸಿದಂತೆ ತಮ್ಮ ಹಿತ ಹಾಗೂ ಉದ್ಯೋಗ ಸ್ಥಿತಿಯನ್ನು ಕಾಯ್ದುಕೊಳ್ಳಲು ಸಂಧಾನದ ಮೂಲಕ ಒಂದು ಒಪ್ಪಂದಕ್ಕೆ ಬರಬೇಕೆಂದು ಅವರ ಬಯಕೆ. ಆದರೆ ಆಡಳಿತ ವರ್ಗದ ಮೇಲೆ ಹೇಳಿದ ಪೂರ್ವ ಶರತ್ತುಗಳಿಂದ ಇದಕ್ಕೆ ಅಡ್ಡಿಯಾಗಿದೆ.

ಬಹುರಾಷ್ಟ್ರೀಯ ಕಂಪನಿಗಳಿಗೆ ಸ್ವೇಚ್ಛೆಯಾಗಿಬಿಡಬೇಕೆಂಬ ಕೇಂದ್ರ ಸರ್ಕಾರದ ನೀತಿಯ ಬಗ್ಗೆ ನಿಮಗೆ ಅರಿವಿದೆ. ಇದನ್ನು ನಾವೆಲ್ಲಾ ಸೇರಿ ಪ್ರತಿಭಟಿಸುತ್ತಿದ್ದೇವೆ.

ಐ.ಟಿ.ಸಿ.ಯ ಬಗ್ಗೆ ಕೂಡ ಕೇಂದ್ರ ಸರ್ಕಾರದ ತೆರಿಗೆ ನೀತಿಯ ಬದಲಾವಣೆಗೆ ಸಂಬಂಧಿಸಿ ಆಡಳಿತ ವರ್ಗದ ಒತ್ತಾಯಕ್ಕೆ ಮಣಿದು ಸಣ್ಣ ಕಂಪನಿಗಳಿಗೆ ಹಾನಿ ಮಾಡಿ ಕೊಟ್ಟಿದೆ.

ಕೇಂದ್ರ ಸರ್ಕಾರ ನೀಡುತ್ತಿರುವ ಬೆಂಬಲದಿಂದ ಈ ಕಂಪನಿ ಹಠಮಾರಿ ಕಾರ್ಮಿಕ ವಿರೋಧಿ ಧೋರಣೆ ತಳೆಯಲು ಧೈರ್ಯ ಮಾಡಿದೆ.

ಕರ್ನಾಟಕ ಸರ್ಕಾರ ಮುಷ್ಕರದ ಮೇಲೆ ವಿಧಿಸಿದ ಬ್ಯಾನ್ ಈ ಪರಿಸ್ಥಿತಿಯನ್ನು ಮತ್ತಷ್ಟು ತೀವ್ರಗೊಳಿಸಿದೆ. ಕಾರ್ಮಿಕರ ಮೇಲೆ ಪೋಲಿಸರು ತೀವ್ರ ದಬ್ಬಾಳಿಕೆಯನ್ನು ಆರಂಭಿಸಿದ್ದಾರೆ. ಸತ್ಯ ದೂರವಾದ ದೂರಿನಮೇಲೆ ನಮ್ಮ ಸಂಘದ ಅನೇಕ ಸಂಗಾತಿಗಳನ್ನು ಬಂಧಿಸ

(3 ನೇ ಪುಟ ನೋಡಿ)

ಕೊಂಕಣ ರೈಲ್ವೆ, ತೈಲಾಗಾರ ಒತ್ತಾಯಿಸಿ

ದ. ಕ. ಜಿಲ್ಲೆಯಾದ್ಯಂತ ಯಶಸ್ವಿ ಜಾಥಾ

ಕೊಂಕಣ ರೈಲ್ವೆ ಹಾಗೂ ಮಂಗಳೂರು ತೈಲಾಗಾರವನ್ನು ಕೂಡಲೇ ಆರಂಭಿಸಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ಫೆಬ್ರವರಿ 14 ಮತ್ತು 15 ರಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ದ.ಕ. ಜಿಲ್ಲಾ ಸಮಿತಿ ನೇತೃತ್ವದಲ್ಲಿ ಜಿಲ್ಲೆಯಾದ್ಯಂತ ವಾಹನ ಜಾಥವನ್ನು ಯಶಸ್ವಿಯಾಗಿ ನಡೆಸಲಾಯಿತು.

ಮಂಗಳೂರಿನ ರೈಲ್ವೆ ನಿಲ್ದಾಣದಲ್ಲಿ ಫೆಬ್ರವರಿ 14 ರಂದು ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾ. ಕೆ.ಆರ್.ಶ್ರೀಯಾನ್ ರವರು ಉದ್ಘಾಟಿಸಿ ಕಾರ್ಯಕ್ರಮದ ಮಹತ್ವ ವಿವರಿಸಿದರು. ಬಹಳ ಕಾಲದಿಂದಲೂ ಜಾರಿಯಾಗದೆ ಕಡೆಗಣಿಸಲ್ಪಟ್ಟಿರುವ ಕೊಂಕಣ ರೈಲ್ವೆ ಹಾಗೂ ತೈಲಾಗಾರ ಯೋಜನೆ ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಚಾರದ ಸಾಧನವಾಗಿಯೇ ಉಳಿದಿದೆ ಎಂದು ಪಕ್ಷದ ರಾಜ್ಯ ಸೆಕ್ರೆಟೇರಿಯೇಟ್ ಸದಸ್ಯ ಕಾ|| ಎನ್.ಕೆ.ಉಪಾಧ್ಯಾಯರು ಆರೋಪಿಸಿದರು. ಪಕ್ಷ ಬೇಧ ಮರೆತು ಕರಾವಳಿಯ ಜನ ಒಂದಾಗಿ ತೀವ್ರ ಹೋರಾಟ ನಡೆಸಲು ಸಿದ್ಧರಾಗಬೇಕೆಂದು ಕರೆ ನೀಡಿದರು. ಕಾ||ಬಿ.ಮಾಧವರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಅಪಾರ ಜನಸ್ತೋಮದ ಶುಭ ಹಾರೈಕೆಯ ಘೋಷಣೆಯೊಂದಿಗೆ ಪ್ರಾರಂಭಗೊಂಡ ಜಾಥಕ್ಕೆ ಎಲ್ಲಾ ಕಡೆಯೂ ಸಾರ್ವಜನಿಕರಿಂದ ಉತ್ಸಾಹದ ಸ್ವಾಗತ ದೊರಕಿತು. ಹಲವಾರು ಕಡೆ ಸಾರ್ವಜನಿಕ ಸಭೆಗಳನ್ನು ನಡೆಸಲಾಯಿತು.

ಕೇಂದ್ರದ ಅಸಡ್ಡೆ ಮಲತಾಯಿ ಧೋರಣೆ ವಿರುದ್ಧ ಜನರು ಒಕ್ಕೊರಳಿನಿಂದ ಸ್ವರ ಎಬ್ಬಿಸಬೇಕೆಂದು ಜನತೆಯಲ್ಲಿ ಸ್ಫೂರ್ತಿ ತುಂಬುವುದರ ಮೂಲಕ ಜಾಗೃತಿಯನ್ನುಂಟುಮಾಡುವಲ್ಲಿ ಜಾಥ ಯಶಸ್ವಿಯಾಯಿತು. ಕೂಳೂರು, ಸುರತ್ಕಲ್ ಮೂಲಕ 14 ರಂದು ಉಡುಪಿ ತಲುಪಿತು.

15 ರಂದು ಬ್ರಹ್ಮಾವರ, ಕುಂದಾಪುರ, ಬೈಂದೂರು ಮಾರ್ಗವಾಗಿ ಜಿಲ್ಲೆಯ ಉತ್ತರದ ಗಡಿಯಾದ ಶಿರೂರಿನಲ್ಲಿ ಸಾರ್ವಜನಿಕ ಸಭೆಯೊಂದಿಗೆ ಜಾಥ ಮುಕ್ತಾಯಗೊಂಡಿತು.

ಇಡೀ ಜಾಥದ ಉದ್ದಕ್ಕೂ ಸಂಚರಿಸಿದ ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾ||ಕೆ.ಆರ್.ಶ್ರೀಯಾನ್, ರಾಜ್ಯಸೆಕ್ರೆಟೇರಿಯೇಟ್ ಸದಸ್ಯರಾದ ಕಾ||ಎನ್.ಕೆ ಉಪಾಧ್ಯಾಯ, ಸಿ.ಐ.ಟಿ.ಯು.ರಾಜ್ಯ ಉಪಾಧ್ಯಕ್ಷರಾದ ಕಾ||ಬಿ.ಮಾಧವ, ಡೇವಿಡ್ ಕರ್ಕಡ, ಕೆ.ಶಂಕರ, ಸುಕುಮಾರ್ ವಿದ್ಯಾರ್ಥಿ ಯುವನಾಯಕರಾದ ಕಾ||ಸುನೀಲ್ ನಟೇಕರ್, ಶಿವಾನಂದ ಕೋಡಿಯವರು ಜಾಥದ ನೇತೃತ್ವವನ್ನು ವಹಿಸಿದ್ದರು.

ಕಾಂ. ಎನ್ನೆಲ್ ಸಹಾಯ ನಿಧಿ

ಕಾರ್ಯದರ್ಶಿ ಮಂಡಳಿ ಕರೆ

ಕರ್ನಾಟಕ ರಾಜ್ಯದಲ್ಲಿ ಕಮ್ಯುನಿಸ್ಟ್ ಚಳುವಳಿಯ ಆದ್ಯಪ್ರವರ್ತಕರಲ್ಲೊಬ್ಬರಾದ ಹಿರಿಯ ನಾಯಕರಾದ ಕಾಂ||ಎನ್.ಎಲ್.ಉಪಾಧ್ಯಾಯರು ಅಸ್ವಸ್ಥತೆಯಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿಯೇ ಪಾಳೆಯಗಾರಿ ಮೌಲ್ಯಗಳ ವಿರುದ್ಧ ಪ್ರತಿಭಟಿಸಿ ಸಾಮಾಜಿಕ ಸುಧಾರಣೆಯ ಕಾರ್ಯದಲ್ಲಿ ಭಾಗವಹಿಸಿದ ಎಲ್ಲರ ಪ್ರೀತಿಯ ಕಾ||ಎನ್ನೆಲ್‌ರವರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅನೇಕ ಹಿರಿಯ ನೇತಾರರಂತೆ ಕಾಂಗ್ರೆಸ್ ಸಮಾಜವಾದಿ ಪಕ್ಷಕ್ಕೆ ಸೇರಿ ಕಮ್ಯುನಿಸ್ಟ್ ಚಳುವಳಿಯತ್ತ ಆಕರ್ಷಿತರಾದರು.

ಎರಡನೇಯ ಮಹಾ ಯುದ್ಧದ ದಿನಗಳಲ್ಲಿ ಕರ್ನಾಟಕದಲ್ಲಿ ಕೆಲಸ ಮಾಡಲು ಕಮ್ಯುನಿಸ್ಟ್ ಪಕ್ಷದ ಕೇಂದ್ರದಿಂದ ನಿಯುಕ್ತರಾದ ಅವರು ಕರ್ನಾಟಕದಲ್ಲಿ ಪಕ್ಷವನ್ನು ಕಟ್ಟುವುದರಲ್ಲಿ ಮಹತ್ವದ ಪಾತ್ರ ವಹಿಸಿದರು. ಕಾರ್ಮಿಕ ಚಳುವಳಿಯನ್ನು ಕಟ್ಟುವುದರಲ್ಲಿ ಬಲಪಡಿಸುವುದರಲ್ಲಿ ಹಗಲಿರುಳೂ ದುಡಿಯುತ್ತಿದ್ದ ಅವರು ಬಂಧನಕ್ಕೆ, ಗಡೀಪಾರು ಆಜ್ಞೆಗಳಿಗೆ ಒಳಗಾದ ಪ್ರಕರಣಗಳು ಅನೇಕ.

ಉತ್ತರ ಕನ್ನಡ ಜಿಲ್ಲೆಯ ಗೇಣಿ ರೈತರ ಹೋರಾಟ, ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಭಾಗವಹಿಸಿ ಹೋರಾಡಿದ ನೆಚ್ಚಿನ ನಾಯಕರ ಚಿಕಿತ್ಸೆ ಶುಶ್ರೂಷೆಗೆ ಸಹಾಯ ಮಾಡಲು ಕಾ||ಎನ್ನೆಲ್ ಸಹಾಯ ನಿಧಿಗಾಗಿ ಕರೆ ಕೊಡಬೇಕೆಂದು ಪಕ್ಷದ ರಾಜ್ಯಕಾರ್ಯದರ್ಶಿ ಮಂಡಳಿ ನಿರ್ಧರಿಸಿದೆ.

ಸಂಯುಕ್ತ ಕಮ್ಯುನಿಸ್ಟ್ ಪಕ್ಷದ, ರಾಷ್ಟ್ರೀಯ ಮಂಡಳಿಯ ನಂತರ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಕೇಂದ್ರ ಸಮಿತಿಯ ಸದಸ್ಯರಾಗಿದ್ದರು.

50 ವರ್ಷಗಳ ಕಾಲ ಕಾ||ಎನ್ನೆಲ್ ಭಾರತದ ಪ್ರಗತಿಪರ ಚಳುವಳಿ, ಕಮ್ಯುನಿಸ್ಟ್ ಚಳುವಳಿಗೆ ನಿರಂತರವಾಗಿ ಶ್ರಮಿಸಿದ ಕಾ|| ಎನ್ನೆಲ್‌ರವರ ಚಿಕಿತ್ಸೆಗಾಗಿ ಪಕ್ಷದ ಸಮಿತಿಗಳು, ಸಂಗಾತಿಗಳು, ಅಭಿಮಾನಿಗಳು ಉದಾರವಾಗಿ ಧನ ಸಹಾಯ ಮಾಡಬೇಕೆಂದು ಕಾರ್ಯದರ್ಶಿ ಮಂಡಳಿ ವಿನಂತಿಸುತ್ತದೆ.

(2 ನೇ ಪುಟದಿಂದ)

ಲಾಗಿದೆ. ಈಗ ಪರಿಸ್ಥಿತಿ ತೀರಾ ಗಂಭೀರವಾಗಿದೆ. ಈ ವಿಷಯದಲ್ಲಿ ನೀವೇ ಮಧ್ಯ ಪ್ರವೇಶ ಮಾಡಬೇಕೆಂದು ಸಂಘ ನಿಮ್ಮಲ್ಲಿ ಮನವಿ ಮಾಡಿದೆ.

ಆದುದರಿಂದ ನೀವು ಮಧ್ಯಪ್ರವೇಶ ಮಾಡಿ, ಆಡಳಿತ ವರ್ಗಕ್ಕೆ ಹೇಳಿ ಈ ಸಮಸ್ಯೆಗಳನ್ನು ಸಂಧಾನ ಮೂಲಕ ಬಗೆಹರಿಸಬೇಕೆಂದು ವಿನಂತಿಸುತ್ತೇನೆ.

ಮಾಮೂಲಿನ ಪರಿಸ್ಥಿತಿಗೆ ಬರಲು ಮುಷ್ಕರದ ಮೇಲೆ ವಿಧಿಸಿದ ಬ್ಯಾನ್ ಅನ್ನು ಹಿಂತೆಗೆಯಬೇಕೆಂದೂ, ಪೋಲಿಸ್ ದಬ್ಬಾಳಿಕೆಯನ್ನು ನಿಲ್ಲಿಸುವ ಕ್ರಮ ಕೈಗೊಳ್ಳಬೇಕೆಂದೂ ವಿನಂತಿಸುತ್ತೇನೆ.

ನಿಮ್ಮ ಶೀಘ್ರ ಉತ್ತರವನ್ನು ನಿರೀಕ್ಷಿಸುತ್ತಾ
ವಂದನೆಗಳೊಂದಿಗೆ

ನಿಮ್ಮ ವಿಶ್ವಾಸಿ
(ಸಮರ್ ಮುಖರ್ಜಿ)

ಹೋಟೆಲ್ ಸನ್ಮಾನ್

ಕಾರ್ಮಿಕರ ಹೋರಾಟ

ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕಸಂಘದನೇತೃತ್ವದಲ್ಲಿಫೆಬ್ರವರಿ 17 ರಂದು 200 ಮಂದಿ ಹೋಟೆಲ್ ಕಾರ್ಮಿಕರು ನಗರದ ಸನ್ಮಾನ್ ಹೋಟೆಲ್ ಮಾಲೀಕರ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಿ ಆನಂದರ್‌ರಾವ್ ವೃತ್ತದಿಂದ ಮಾಲೀಕರ ಮನೆಯವರೆಗೆ ಮೆರವಣಿಗೆ ನಡೆಸಿ ಬಹಿರಂಗಸಭೆ ನಡೆಸಲಾಯಿತು. ಹೋಟೆಲ್ ಕಾರ್ಮಿಕರು ಸಂಘ ರಚಿಸಿಕೊಂಡು ಕನಿಷ್ಠ ಕೂಲಿ ಬೇಡಿಕೆ ಮುಂದಿಟ್ಟ ಕೂಡಲೇ 10 ಜನ ಕಾರ್ಮಿಕರನ್ನು ವಜಾಗೊಳಿಸಲ್ಪಟ್ಟರು. ಮಾಲೀಕನ ಹಠಮಾರಿ ಧೋರಣೆವಿರುದ್ಧ ಸನ್ಮಾನ್ ಹೋಟೆಲ್ ಕಾರ್ಮಿಕರು ಕನಿಷ್ಠಕೂಲಿ ಜಾರಿ, 8 ಗಂಟೆ ಕೆಲಸ, ಇ.ಎಸ್.ಐ, ಭವಿಷ್ಯ ನಿಧಿ, ಮುಂತಾದ ಬೇಡಿಕೆ ಒತ್ತಾಯಿಸಿ ಹೋರಾಟ ನಡೆಸಲಾಗುತ್ತಿದೆ. ಮೆರವಣಿಗೆಯ ನಂತರ ನಡೆದ ಸಭೆಯನ್ನುದ್ದೇಶಿಸಿ ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಕಾ|ಇ.ಕೆ.ಎನ್ ರಾಜನ್, ಉಪಾಧ್ಯಕ್ಷ ಕಾ||ಅಡವೀಶ್, ಸಿ.ಐ.ಟಿ.ಯು. ಮುಖಂಡ ಕಾ||ಆರ್. ಶ್ರೀನಿವಾಸ್, ಹಾಗೂ ಕಾ||ಎಸ್.ಆರ್ ಆರಾಧ್ಯರವರು ಮಾತನಾಡಿ ಮಾಲೀಕನ ನೀತಿ ಖಂಡಿಸಿ ಎಲ್ಲಾ ಕಾರ್ಮಿಕರನ್ನು ಕೂಡಲೇ ಕೆಲಸಕ್ಕೆ ತೆಗೆದುಕೊಂಡು ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿದರು.

ಐಕ್ಯರಂಗಕ್ಕೆ

ಇಂದೇ

ಚಂದಾದಾರರಾಗಿರಿ

ವಾರ್ಷಿಕ ಚಂದಾ 50 ರೂ.

ಅರ್ಧ ವಾರ್ಷಿಕ ಚಂದಾ 25 ರೂ.

ಕಾಂ. ಎನ್ನೆಲ್‌ಗೆ ರಕ್ತದಾನ ಮಾಡಿದ ಸಂಗಾತಿಗಳು

ಪಿ.ಜಗನ್ನಾಥ್ (ರಾಜ್ಯ ಸಮಿತಿ ಸದಸ್ಯರು)
ಎ.ಇ.ಸುಬ್ರಮಣ್ಯಂ (ಜಿಲ್ಲಾ ಸಮಿತಿ ಸದಸ್ಯ)
ಎಸ್.ವೆಂಕಟಕೃಷ್ಣ (ಜಿ.ಐ.ಸಿ ರಾಜ್ಯ ಕಾರ್ಯದರ್ಶಿ)
ವಿ.ಎಂ.ಪಿ.ನಂಬೀಶನ್ (ಬಿ.ಇ.ಎಲ್)
ಚಂದ್ರಶೇಖರ್‌ಕಾರಂತ್ (ಎ.ಆರ್.ಡಿ.ಯು.)
ಅಜಯ್ (ಎನ್.ಎಲ್.ರವರ ಮಗ)

ಕಾ||ಎನ್.ಎಲ್.ಉಪಾಧ್ಯಾಯರವರ ವೈದ್ಯಕೀಯಚಿಕಿತ್ಸೆಗಾಗಿ ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿ ಚಿಕಿತ್ಸಾ ನಿಧಿಗಾಗಿ ನೀಡಿದ ಕರೆಯಂತೆ ವಿವಿಧ ಸಂಘಟನೆಗಳು ಹಾಗೂ ಹಿತೈಷಿಗಳಿಂದ ಸಂಗ್ರಹಿಸಲಾದ ಹಣದ ವಿವರ ಈ ಕೆಳಕಂಡತಿದೆ.

		ರೂ. ಪೈ
1	ಕಲಾವಿದರು ಸಾಹಿತಿಗಳಿಂದ	200-00
2	ದೇವರಾಜ್. ಶ್ರೀರಾಮಪುರ	25-00
3	ಪಿ.ಎ.ರೆಡ್ಡಿ ಪ್ರಕಾಶನಗರ	100-00
4	ಎಲ್.ಐ.ಸಿ.ಉದ್ಯೋಗಿಗಳಿಂದ	500-00
5	ಬಿ.ಹೆಚ್.ಇ.ಎಲ್ ಕಾರ್ಮಿಕರಿಂದ	125-00
6	ಯಶವಂತಪುರ ಸಂಗಾತಿಗಳಿಂದ	300-00
7	ಬ್ಯಾಂಕ್ ಉದ್ಯೋಗಿಗಳಿಂದ	200-00
8	ಮೈಕೋ ಕಾರ್ಮಿಕರಿಂದ	1620-00
9	ಐ.ಟಿ.ಐ ಕಾರ್ಮಿಕರಿಂದ	385-00
10	ಆರ್.ಐ.ಸಿ. ಕಾರ್ಮಿಕರಿಂದ	500-00
11	ಹೆಚ್.ಎನ್.ನಾಗಮೋಹನ್‌ದಾಸ್	50-00
12	ಡಿ.ವೈ.ಎಫ್.ಐ. ಬೆಂಗಳೂರು ಜಿಲ್ಲಾ ಸಮಿತಿ	60-00
13	ಚಿಕ್ಕವಜ್ರಪ್ಪ ತಲಘಟ್ಟಪುರ	50-00
14	ಜಿ.ಆರ್.ಇ. ಕಾರ್ಮಿಕರಿಂದ	400-00
15	ಕೆ.ಆರ್.ಪುರ ಸಂಗಾತಿಗಳಿಂದ	325-00
16	ವೆಂಕಟಸ್ವಾಮಿ ಮತ್ತು ಮಿತ್ರರು ನಾರಾಯಣಪುರ ಕೆ.ಆರ್.ಪುರ	500-00

ಮೈಕೋ ಕಾರ್ಮಿಕರಿಂದ ಸಂಗ್ರಹವಾದವಿವರ

17	ಎಸ್.ಟಿ.ಅರಸು	50 ರೂ
18	ಶಿವಕುಮಾರ್	”
19	ಶಿವಶಂಕರ್	”
20	ವಿದಾತೆ	”
21	ಪಾಂಡಿಯನ್	”
22	ಮುನಿಸ್ವಾಮಿ	”
23	ದೇವರಾಜ್	”
24	ಮಧುಸೂದನ್	”
25	ಎನ್.ಕೆ.ಶ್ರೀನಿವಾಸ್	”
26	ದೇವದನ್	”
27	ಜ್ಞಾನೇಶ್ವರರಾವ್	”
28	ರಾಮದಾಸ್	”
29	ಗೋವಿಂದರಾಜ್	”
30	ಶಂಕರಪ್ಪ	”
31	ಆರ್.ಎಸ್.ಮೂರ್ತಿ	”
32	ಸದಾಶಿವ ರೆಡ್ಡಿ	”
33	ಮಂಡಪ್ಪ	”
34	ಅಮ್ಮಣ್ಣ	”
35	ರಾಮಕೃಷ್ಣ	”
36	ಚಂದ್ರಶೇಖರ್‌ರಾವ್	”
37	ತಿಮ್ಮೇಗೌಡ	”
38	ಶ್ರೀಧರರಾಜ್	”
39	ಎ ಜಯರಾಂ	25 ರೂ.
40	ಶಂಕರೇಗೌಡ	”
41	ಎನ್.ವೀರಾಸ್ವಾಮಿ	”
42	ವೆಂಕಟೇಶ್	”
43	ರಾಮಣ್ಣ	”
44	ಬೈಲಪ್ಪ	”
45	ಬಿ.ಕೆ ಮೋಹನ್	”
46	ಐ. ಆರ್. ಸಿಂಧ್ಯೆ	”
47	ಕೆ.ಆರ್.ಎಸ್.ಮೂರ್ತಿ	”
48	ಕೃಷ್ಣಪ್ಪ	”
49	ರಾಧಾಕೃಷ್ಣನ್	”
50	ಯಜ್ಞನಾರಾಯಣ	”

(8 ನೇ ಪುಟ ನೋಡಿ)

ಹಿಂದುಳಿದ ರೈಲು ಸಾರಿಗೆ-ಕರ್ನಾಟಕದ ಅಭಿವೃದ್ಧಿಗೆ ತೊಡಕು

ಶರತ್‌ಚಂದ್ರ

ಕರ್ನಾಟಕದಲ್ಲಿ ರೈಲು ಮಾರ್ಗದ ಅಭಿವೃದ್ಧಿಯ ಬಗ್ಗೆ ಸಿ.ಪಿ.ಐ.(ಎಂ) ನಿರಂತರವಾಗಿ ದನಿ ಎತ್ತುತ್ತಿದೆ. ಇತ್ತೀಚೆಗೆ ಕೊಂಕಣ ರೈಲ್ವೆಯ ಕಲುವಾಗಿ ಜಾಥಾ ಕಾರ್ಯಕ್ರಮ ನಡೆಸಲಾಯಿತು. ರೈಲ್ವೆ ಬಜೆಟ್ ಮಂಡನೆಯ ಸಂದರ್ಭದಲ್ಲಿ ಕರ್ನಾಟಕದ ರೈಲ್ವೆಯ ತುಲನಾತ್ಮಕ ಪರಿಶೀಲನೆಯ ಬಗ್ಗೆ ಒಂದು ನೋಟ.

ಒಂದು ಪ್ರದೇಶದ ಅಭಿವೃದ್ಧಿಗೆ ರೈಲು-ದಾರಿಯ ಅಭಿವೃದ್ಧಿ ಮುಖ್ಯ ಸೂಚಕಗಳಲ್ಲಿ ಒಂದು ಎನ್ನಬಹುದು. ಆರ್ಥಿಕ ಅಭಿವೃದ್ಧಿ ರೈಲುದಾರಿಯ ಅಭಿವೃದ್ಧಿ ಜೊತೆ ತಳುಕು ಹಾಕಿಕೊಂಡಿರುತ್ತದೆ ಕರ್ನಾಟಕ ರೈಲುದಾರಿ ಅಭಿವೃದ್ಧಿಯ ದೃಷ್ಟಿಯಿಂದ ಹಿಂದುಳಿದರಾಜ್ಯ. ಕೋಷ್ಟಕ-1ರಲ್ಲಿ ಕೊಟ್ಟಿರುವ ಅಂಕೆ ಸಂಖ್ಯೆ ಇದನ್ನು ಸ್ಪಷ್ಟಪಡಿಸುತ್ತದೆ.

ಕರ್ನಾಟಕದ ರೈಲು ದಾರಿಯ ಸೂಚಿ ಅಖಿಲ ಭಾರತ ಸರಾಸರಿಗಿಂತ ತುಂಬಾ ಕಡಿಮೆ ಮಾತ್ರವಲ್ಲ, ದಕ್ಷಿಣ ಭಾರತದ ನೆರೆ ರಾಜ್ಯಗಳಿಗಿಂತಲೂ ಕಡಿಮೆ. ಇದಕ್ಕೆ ಒಂದೇ ಅಪವಾದವೆಂದರೆ ಜನ ಸಂಖ್ಯೆಯ ಪ್ರಕಾರ ರೈಲು ದಾರಿಯ ಉದ್ದ ಕೇರಳದಲ್ಲಿ ಕರ್ನಾಟಕಕ್ಕಿಂತಲೂ ಕಡಿಮೆ. ಆದರೆ ಆ ಸೂಚಿಯಲ್ಲೂ ಬ್ರಾಡ್‌ಗೇಜ್ ಪ್ರಮಾಣ ತೆಗೆದುಕೊಂಡರೆ ಕರ್ನಾಟಕದ್ದೇ ಕಡಿಮೆ. ಒಟ್ಟಾರೆಯಾಗಿ ಯಾವ ಸೂಚನೆಯ ದೃಷ್ಟಿಯಿಂದ ನೋಡಿದರೂ, ಕರ್ನಾಟಕದಲ್ಲಿ ಒಟ್ಟಾರೆ ರೈಲು ದಾರಿಯ ಅದರಲ್ಲೂ ಬ್ರಾಡ್‌ಗೇಜ್ ರೈಲುದಾರಿಯ ಅಭಾವ ಅತಿ ದೊಡ್ಡ ದೋಷ.

ಕರ್ನಾಟಕದ ರೈಲುದಾರಿಗಳಲ್ಲಿ ಮೀಟರ್‌ಗೇಜ್ ಹೆಚ್ಚು ನ್ಯಾರೋಗೇಜ್ ಇರುವ ದಕ್ಷಿಣ ಭಾರತದ ಏಕಮಾತ್ರ ರಾಜ್ಯ ಕರ್ನಾಟಕ. ಬೆಂಗಳೂರು ಗುಂತಕಲ್-ವಾಡಿ ದಾರಿಯ ಕರ್ನಾಟಕದ ಒಳಗೆ ಹಾದು ಹೋಗುವ ಭಾಗ ಮತ್ತು ಬೆಂಗಳೂರು-ಮದ್ರಾಸು ದಾರಿಯ ಕರ್ನಾಟಕದ ಒಳಗಿನ ಸಣ್ಣ ಭಾಗ ಬಿಟ್ಟರೆ, ಕರ್ನಾಟಕದಲ್ಲಿ ಹೆಚ್ಚಿನ ರೈಲು ದಾರಿಗಳು ಮೀಟರ್‌ಗೇಜ್‌ನದ್ದೇ ಆಗಿವೆ. ಕರ್ನಾಟಕದ ದೊಡ್ಡ ಭಾಗವನ್ನು ಆವರಿಸುವ ಬೆಂಗಳೂರು ಮೀರಜ್ ದಾರಿ ಮೀಟರ್‌ಗೇಜ್. ಹೊಸದಾಗಿ ಆಗಿರುವ ಬೆಂಗಳೂರು-ಮಂಗಳೂರು ಸಹ ಮೀಟರ್ ಗೇಜ್ ಎಂಬುದು ವಿಪರ್ಯಾಸಕರ. ಸದ್ಯಕ್ಕೆ ಕರ್ನಾಟಕದಲ್ಲಿ ವಿದ್ಯುದೀಕರಿಸಿದ ರೈಲು ದಾರಿಗಳು ಇಲ್ಲವೇ ಇಲ್ಲ. ಡಬ್ಬಲ್ ಲೈನ್ ಇರುವ ಮೀಟರ್‌ಗೇಜ್ ಸಹ ಇಲ್ಲವೇ ಇಲ್ಲ.

ಬ್ರಾಡ್‌ಗೇಜ್‌ನ ಅಗತ್ಯ

ಮುಖ್ಯ ರೈಲು ದಾರಿಗಳು ಬ್ರಾಡ್‌ಗೇಜ್ ಆಗಿರಬೇಕಾಗಿರುವುದು ಅತಿ ಅಗತ್ಯ. ಉದಾಹರಣೆಗೆ ಬೆಂಗಳೂರು-ಮೀರಜ್-ಮೀಟರ್‌ಗೇಜ್ ಆಗಿದ್ದು, ಮೀರಜ್-ಮುಂಬಯಿ ಬ್ರಾಡ್‌ಗೇಜ್ ಆಗಿರುವುದರಿಂದ ಮುಂಬಯಿ ಪ್ರಯಾಣದಲ್ಲಿ ಟ್ರೈನ್ ಬದಲಾಯಿಸಬೇಕಾಗುತ್ತದೆ ಇದರಿಂದ ವಿಳಂಬ, ಅನಾನುಕೂಲತೆ ಪ್ರಯಾಣಿಕರಿಗೆ. ಅಷ್ಟು ಮಾತ್ರವಲ್ಲ ಸರಕುಗಳ ಸಾಗಾಣಿಕೆಗೂ ಅಡ್ಡಿ. ಮೀಟರ್‌ಗೇಜ್‌ನಿಂದ ಬ್ರಾಡ್‌ಗೇಜ್‌ಗೆ ಬದಲಾಯಿಸುವ ಜಂಕ್ಷನ್‌ಗಳಲ್ಲಿ ಸಾಗಾಣಿಕೆ ಡಬ್ಬಗಳು ಹಲವು ದಿನಗಳು ಬಿದ್ದಿರುತ್ತವೆ. ಇದರಿಂದ ವಿಳಂಬ ಮಾತ್ರವಲ್ಲ, ದೋಚುವಿಕೆ, ಸರಕುಗಳು ಟ್ರೈನ್ ಬದಲಾಯಿಸುವಾಗ ನಷ್ಟವಾಗುವ, ಹಾಳಾಗುವ ಅಪಾಯ ಹೆಚ್ಚು. ಇದರಿಂದಾಗಿ ಸರಕು ಸಾಗಾಣಿಕೆದಾರರು ಮೀಟರ್‌ಗೇಜ್ ರೈಲುದಾರಿಗಿಂತ ರಸ್ತೆ ಸಾರಿಗೆಯನ್ನು ಉಪಯೋಗಿಸುತ್ತಾರೆ ಅದು ಸ್ವಲ್ಪ ದುಬಾರಿಯಾದರೂ. ಬ್ರಾಡ್‌ಗೇಜ್ ರೈಲು ದಾರಿಯಿಲ್ಲದಿರುವ ಕರ್ನಾಟಕದ ವಾಣಿಜ್ಯ ಕೇಂದ್ರವಾದ ನಗರಗಳಲ್ಲಿ ಸರಕು ಸಾಗಾಣಿಕೆ ಹೆಚ್ಚುತ್ತಿದರೂ ರೈಲು ಸಾಗಾಣಿಕೆ ಕಡಿಮೆಯಾಗುತ್ತಿರುವ ವಿಚಿತ್ರ ಬೆಳವಣಿಗೆ ಕಂಡುಬರುತ್ತದೆ. ಉದಾಹರಣೆಗೆ ಭದ್ರಾವತಿಯಿಂದ ಹೋಗುವ ಸರಕು ಸಾಗಾಣಿಕೆ (ರೈಲು ದಾರಿಯಿಂದ) 1981ರಲ್ಲಿ 1.2 ಲಕ್ಷ ಮೆಟ್ರಿಕ್ ಟನ್‌ಗಳಿಂದ 1986ರಲ್ಲಿ 0.56 ಲಕ್ಷ ಮೆ.ಟನ್‌ಗಳಿಗೆ ಇಳಿದಿದೆ. ಮೈಸೂರಿನಲ್ಲೂ ರೈಲು ಸರಕು ಸಾಗಾಣಿಕೆ ದರ 1981ರಲ್ಲಿ 15,000 ಮೆಗಾಟನ್‌ಗಳಿಂದ 1986 ರಲ್ಲಿ 7,000 ಮೆ ಟನ್‌ಗಳಿಗೆ ಇಳಿದಿದೆ. ಆದರೆ ಒಟ್ಟು ಸರಕು ಸಾಗಾಣಿಕೆ, 1975–1985 ಅವಧಿಯಲ್ಲಿ ಇಮ್ಮಡಿ ಆಗಿದೆ. ತುಮಕೂರು ಮಂಗಳೂರುಗಳಲ್ಲೂ ಇದೇ ಪರಿಸ್ಥಿತಿ ಇದೆ. ಮೀಟರ್ ಗೇಜ್‌ನಲ್ಲಿ ಓಡುವ ರೈಲುಗಳು ಬ್ರಾಡ್‌ಗೇಜ್‌ಗಿಂತ ವೇಗದಲ್ಲೂ ಕಡಿಮೆ ಬ್ರಾಡ್‌ಗೇಜ್‌ನ ಅಭಾವ ಭದ್ರಾವತಿ, ಮಂಗಳೂರು, ಮೈಸೂರು, ತುಮಕೂರು, ಹುಬ್ಬಳ್ಳಿ ಮುಂತಾದ ಕೈಗಾರಿಕಾ, ವಾಣಿಜ್ಯ ಕೇಂದ್ರಗಳಲ್ಲಿ ಆರ್ಥಿಕ ಅಭಿವೃದ್ಧಿಯ ದರವನ್ನು ಕುಂಠಿತಗೊಳಿಸಿದೆ. ರೈಲು ಸಾಗಾಣಿಕೆ ಒಂದು ಪ್ರದೇಶದಲ್ಲಿರುವ ಕೈಗಾರಿಕೆಗೆ ಬೇಕಾದ ಕಚ್ಚಾ ಸರಕುಗಳನ್ನು ತರುವುದು ಮಾತ್ರವಲ್ಲದೆ, ಉತ್ಪನ್ನಗಳನ್ನು ತೆಗೆದುಕೊಂಡು ಹೋಗುತ್ತದೆ. ಆದ್ದರಿಂದ ಕಚ್ಚಾ ಸಾಮಗ್ರಿ ದೊರೆಯುವ ಮತ್ತು ಮಾರುಕಟ್ಟೆಗಳಿರುವ ಪ್ರದೇಶಗಳಿಗೆ ಬ್ರಾಡ್‌ಗೇಜ್ ರೈಲುದಾರಿ ಆರ್ಥಿಕ ಅಭಿವೃದ್ಧಿಗೆ ಕುಮ್ಮಕ್ಕು ನೀಡುತ್ತದೆ.

ಆದ್ದರಿಂದ ಮುಖ್ಯ ರೈಲು ದಾರಿಗಳ ಬ್ರಾಡ್‌ಗೇಜ್‌ಗೆ ಬದಲಾವಣೆ ಕರ್ನಾಟಕದ ಮುಖ್ಯ ಬೇಡಿಕೆ. ಈ ಮುಖ್ಯದಾರಿಗಳು, ಬೆಂಗಳೂರು ಮೀರಜ್ ಬೆಂಗಳೂರು-ಮಂಗಳೂರು, ಬೆಂಗಳೂರು-ಮೈಸೂರು ಪುಣೆ-ಬೆಂಗಳೂರು ದಾರಿ ಮೀಟರ್ ಗೇಜ್‌ನಿಂದ ಬ್ರಾಡ್‌ಗೇಜ್‌ಗೆ ಬದಲಾವಣೆ ಕಾರ್ಯ ಪುಣೆಯಿಂದ ಆರಂಭವಾಗಿ ಮೀರಜ್‌ವರೆಗೆ ಬಂದು ನಿಂತಿದೆ. ಈ ದಾರಿಯ ಕರ್ನಾಟಕದ ಭಾಗದ ಕಾರ್ಯ ಇನ್ನೂ ಆರಂಭವಾಗಿಲ್ಲ. ಬೆಂಗಳೂರು-ಮೈಸೂರು ಬ್ರಾಡ್‌ಗೇಜ್‌ಗೆ ಬದಲಾವಣೆ ಮಾಡುವ ಕೆಲಸ 1979 ರಲ್ಲಿ ಆರಂಭವಾಗಿದ್ದರೂ ಇನ್ನೂ ಕುಂಟಿಕೊಂಡೇ ಮುಂದುವರಿಯುತ್ತಿದೆ. ಆರಂಭವಾದಾಗ ಈ ಯೋಜನೆಗೆ 26 ಕೋಟಿ ರೂ. ಕೆಲಸ ಎಂದು ಅಂದಾಜು ಮಾಡಲಾಗಿದ್ದು, ಕಳೆದ 8 ವರ್ಷಗಳಲ್ಲಿ 8.4 ಕೋಟಿ ರೂ. ಮಾತ್ರ ಖರ್ಚು ಮಾಡಲಾಗಿದೆ. ಈ ವಿಳಂಬದಿಂದಾಗಿ ಈಗ ಈ ಯೋಜನೆ ವೆಚ್ಚ 56 ಕೋಟಿಗೇರಿದೆ. ಅಂದರೆ ಒಟ್ಟು ಕೆಲಸದ ಒಂದು ಸಣ್ಣ ಭಾಗಮಾತ್ರ ಮುಗಿದಿದೆ ಎಂದಾಯ್ತು. ಉತ್ತರದಿಂದ ಬೆಂಗಳೂರಿಗೆ ಬ್ರಾಡ್‌ಗೇಜ್ ಸಂಪರ್ಕ ಕಲ್ಪಿಸುವ ಬೆಂಗಳೂರು-ಗುಂತಕಲ್ ಬ್ರಾಡ್‌ಗೇಜ್ ಬದಲಾವಣೆ ಕಾರ್ಯ ಇತ್ತೀಚೆಗೆ ಅಂದರೆ 1983ರಲ್ಲಷ್ಟೇ ಮುಗಿಯಿತು ಎಂದು ನೆನಪಿನಲ್ಲಿಟ್ಟುಕೊಳ್ಳಬೇಕು. ಉಳಿದ ಎರಡುಮುಖ್ಯ ದಾರಿಗಳ ಬದಲಾವಣೆ ಕಾರ್ಯ ಯೋಜನಾ ಸಂಪನ್ಮೂಲಗಳ ಅಭಾವದಿಂದ ಆರಂಭವೇ ಆಗಿಲ್ಲ. ಮಂಗಳೂರು-ಹಾಸನ ಮೀಟರ್‌ಗೇಜ್ ಆರ್ಥಿಕವಾಗಿ ಅಷ್ಟು ಲಾಭದಾಯಕವಾಗಿಲ್ಲ ಎಂದು ರೈಲ್ವೇ ಅಧ್ಯಯನ ಒಂದು ತಿಳಿಸಿದೆ. ಇದಕ್ಕೆ ಕಾರಣ ನಮಗೆ ಈಗಾಗಲೇ ಗೊತ್ತು. ಆದರೆ ಈ ನೆಪವೊಡ್ಡಿ ಬ್ರಾಡ್‌ಗೇಜ್ ಕೆಲಸ ತೆಗೆದುಕೊಂಡಿಲ್ಲ. ಮಂಗಳೂರಿನಲ್ಲಿ ಯೋಜಿತವಾಗಿರುವ ತೈಲಾಗಾರ ಆರಂಭವಾದಾಗ ಅದರ ಉತ್ಪನ್ನಗಳನ್ನು ಸಾಗಾಣಿಕೆ ಮಾಡುವ ಸಾಮರ್ಥ್ಯ ಪ್ರಸ್ತುತ ರೈಲುದಾರಿಗಿಲ್ಲ. ಆದ್ದರಿಂದ ತೈಲಾಗಾರದ ಸ್ಥಾಪನೆಯ ಯೋಜನೆಗೇ ಧಕ್ಕೆ ಬರುವ ಸಂಭವವಿದೆ. ಪೈಪ್‌ಗಳ ಮೂಲಕ ತೈಲ ಸಾಗಿಸುವ ಬದಲಿ ಯೋಜನೆ ಬಗ್ಗೆ ದಕ್ಷಿಣ ರೈಲ್ವೇ ಅಧ್ಯಯನ ನಡೆಸಿದೆ. ಪೈಪ್ ಲೈನ್ ಮೂಲಕ ತೈಲ ಸಾಗಿಸುವ ಬದಲಿ, ಮಂಗಳೂರು-ಹಾಸನವನ್ನು ಬ್ರಾಡ್‌ಗೇಜ್ ಆಗಿ ಪರಿವರ್ತಿಸುವ ಯೋಜನೆಗೆ ಹೋಲಿಸಿದರೆ ಸ್ವಲ್ಪ ದುಬಾರಿಯಾದರೂ, ಮುಂದೆ ನಿರ್ವಹಣಾ ವೆಚ್ಚಗಳು ಕಡಿಮೆ ಎಂದಿದೆ. ಆದರೆ ಬ್ರಾಡ್‌ಗೇಜ್ ಬದಲಾವಣೆ ಬಹು ಉದ್ದೇಶೀಯ ಸಾರಿಗೆ ಸಾಧನವಾಗಿ ಹೆಚ್ಚು ಉಪಯೋಗಕಾರಿ ಎಂಬ ಆಧಾರದ ಮೇಲೆ ಇದಕ್ಕಾಗಿ ಒತ್ತಾಯ ಹೆಚ್ಚಾಗಬೇಕಾಗಿದೆ. ಮಂಗಳೂರು ಬಂದರು ಈಗ ಐ.ಎಸ್.ಓ. ಡಬ್ಬಿ (ರೈಲು, ಹಡಗು ಮುಂತಾದ ವಿವಿಧ ಸಾಗಾಣಿಕೆಗೆ ಸಾಮಾನ್ಯವಾದ ಅಂತರಾಷ್ಟ್ರೀಯ ಒಪ್ಪಿತ ಡಬ್ಬಿ)ಗಳನ್ನು ನಿರ್ವಹಿಸುವ ಸಾಮರ್ಥ್ಯವಿರುವುದರಿಂದ ಮತ್ತು ಬೆಂಗಳೂರು ರೈಲು ನಿಲ್ದಾಣದಲ್ಲಿ ಮಾತ್ರ ಇವನ್ನು ನಿರ್ವಹಿಸುವ ಸಾಮರ್ಥ್ಯವಿರುವುದರಿಂದ ಇವೆರಡರ ಮಧ್ಯೆ ಬ್ರಾಡ್‌ಗೇಜ್ ದಾರಿ ಅಗತ್ಯವಾಗಿದೆ. ಈ ಐ.ಎಸ್.ಓ. ಡಬ್ಬಿಗಳನ್ನು ಬ್ರಾಡ್‌ಗೇಜ್‌ನಲ್ಲಿ ಮಾತ್ರ ತೆಗೆದುಕೊಂಡು ಹೋಗುವುದು ಸಾಧ್ಯ. ಈಗ ಇವು ಸುತ್ತು ಬಳಸಿ ಹೋಗುವ ಮಂಗಳೂರು-ಶೋರನೂರ್, ಜೋಲಾರಪೇಟೆ, ಬೆಂಗಳೂರು ಹಾದಿಯಲ್ಲಿ ಸಾಗಿಸಲ್ಪಡುತ್ತವೆ.

ಸದ್ಯಕ್ಕೆ ಕರ್ನಾಟಕದ ಗಡಿಯ ಹೊರಗೆ ಅಥವಾ ಸ್ವಲ್ಪ ಒಳಗೆ ನಿಲ್ಲುವ ಉತ್ತರದಲ್ಲಿ ಮೀರಜ್‌ನಲ್ಲಿ, ದಕ್ಷಿಣದಲ್ಲಿ ಮಂಗಳೂರಿನಲ್ಲಿ, ಪೂರ್ವದಲ್ಲಿ ಬೆಂಗಳೂರಿನಲ್ಲಿ ನಿಂತು ಹೋಗುವ ಬ್ರಾಡ್‌ಗೇಜ್‌ನ್ನು ಕರ್ನಾಟಕದೊಳಗೆ ತರುವುದು ಮುಖ್ಯ ಬೇಡಿಕೆಯಾಗಬೇಕು.

ಕೊಂಕಣ ರೈಲ್ವೆ

ಎರಡನೆಯ ದೊಡ್ಡ ಬೇಡಿಕೆ ಕೆಲವು ಮುಖ್ಯ, ಎಂದೋ ಆಗಬೇಕಿದ್ದ ಹೊಸ ರೈಲು ದಾರಿಗಳ ನಿರ್ಮಾಣ. ಇದರಲ್ಲಿ ಮುಖ್ಯವಾದುದು ಕೊಂಕಣ ರೈಲ್ವೆ. ಮಹಾರಾಷ್ಟ್ರ, ಕರ್ನಾಟಕ, ಕೇರಳ ತಮಿಳುನಾಡುಗಳನ್ನು ಒಂದೇ ದಾರಿಯಲ್ಲಿ ಸಂಪರ್ಕಿಸುವ ಈ ಯೋಜನೆ ಬಗ್ಗೆ ಮಾತು ಹಲವಾರು ದಶಕಗಳಿಂದಲೂ ಕೇಳಿ ಬಂದಿತ್ತು. ಕೊನೆಗೂ ಕೇಂದ್ರದಲ್ಲಿ ಜನತಾ ಅಧಿಕಾರದ ಕಾಲದಲ್ಲಿ ಈ ಯೋಜನೆಗೆ ಅಂಗೀಕಾರ ದೊರಕಿತು. ಮುಂಬಯಿ, ಮಂಗಳೂರುಗಳನ್ನು ಕರಾವಳಿಯುದ್ದಕ್ಕೂ ರೈಲು ದಾರಿ ನಿರ್ಮಿಸಿ ಜೋಡಿಸುವುದು ಈ ಯೋಜನೆಯ ಉದ್ದೇಶ, ಮಂಗಳೂರು-ಉಡುಪಿ, ಮುಂಬಯಿ ರೋಹಾ ವಿಭಾಗದಲ್ಲಿ ವಿವರವಾದ ಸರ್ವೇ ಸಹ ನಡೆಯಿತು. ಮುಂಬಯಿ ರೋಹಾ ವಿಭಾಗ (ಸುಮಾರು 60 ಕಿ.ಮೀ.) ಈಗಾಗಲೇ ನಿರ್ಮಿಸಲಾಗಿದ್ದು, ರೈಲುಗಳು ಓಡಾಡಲಾರಂಭಿಸಿವೆ. ಆದರೆ ಮಂಗಳೂರಿನಿಂದ ಆರಂಭವಾಗಬೇಕಾದ ಕಾರ್ಯ ಇನ್ನೂ ಆರಂಭವಾಗಲೇ ಇಲ್ಲ. ಮಂಗಳೂರು ಉಡುಪಿ ದಾರಿಯ ಸರ್ವೇ ಮಾತ್ರ ಆಗಿದೆ, ಮೂರು ವರ್ಷಗಳ ಹಿಂದೆ. ಇದೇ ರೀತಿ ಹುಬ್ಬಳ್ಳಿ ಕಾರವಾರದ ರೈಲುದಾರಿ (200 ಕಿ.ಮೀ.) ನಿರ್ಮಾಣ ಹಲವು ವರ್ಷಗಳ ಆಸೆಯಾಗಿ ಉಳಿದಿದೆ. ಒಂದು ಬಾರಿ ಸ್ಯಾಂಕ್ಷನ್ ಆಗಿದ್ದ ಈ ಯೋಜನೆಯನ್ನು ಹಿಂತೆಗೆದುಕೊಳ್ಳುವ ಸಾಧ್ಯತೆ ಇದೆ. ಇದು ಮಾತ್ರವಲ್ಲ ಇನ್ನೂ ಹಲವು ಮುಖ್ಯ ಪಟ್ಟಣಗಳನ್ನು ರೈಲು ಮೂಲಕ ಜೋಡಿಸುವ ಸಾಧ್ಯತೆ ಇದೆ. ದಕ್ಷಿಣ ಭಾರತದ ನೆರೆ ರಾಜ್ಯಗಳಲ್ಲಿ ಮುಖ್ಯ ಪಟ್ಟಣಗಳನ್ನು ಜೋಡಿಸುವ ಮುಖ್ಯ ಸಾರಿಗೆ ಸಾಧನ ರೈಲು. ಆದರೆ ಕರ್ನಾಟಕದಲ್ಲಿ ರೈಲಿನ ಅಭಾವದಿಂದ ಬಸ್ಸು ಸಾರಿಗೆಯೇ ಪ್ರಮುಖವಾಗಿದೆ. ಬಸ್ಸು ಸಾರಿಗೆಯ ಮೇಲೆ ಸಂಪೂರ್ಣ ಸಾರಿಗೆಯ ಒತ್ತಡ ಬಿದ್ದಿದೆ. ಬಸ್ಸು ಸಾರಿಗೆ ಇದನ್ನು ನಿರ್ವಹಿಸಲಾರದೆ ಒಟ್ಟಾರೆ ಸಾರಿಗೆ ಸಮಸ್ಯೆ ತೀವ್ರವಾಗುತ್ತಿದೆ.

ಮುಖ್ಯ ದಾರಿಗಳ ವಿದ್ಯುದೀಕರಣ ಕರ್ನಾಟಕದಲ್ಲಿ ಪೂರ್ತಿ ಹಿಂದೆ ಬಿದ್ದಿದೆ. ಬೆಂಗಳೂರು ಜೋಲಾರಪೇಟೆ ವಿಭಾಗದ ವಿದ್ಯುದೀಕರಣ ಹೀಗೆ ಹಲವಾರು ವರ್ಷಗಳಿಂದ ನನೆಗುದಿಗೆ ಬಿದ್ದಿದೆ.

ಈಗಾಗಲೇ ಲೈನ್ ಇದ್ದ ಕಡೆ ಡಬ್ಬಲ್ ಲೈನ್ ಹಾಕುವ ಕೆಲಸ ಅಷ್ಟೇನೂ ದುಬಾರಿಯಲ್ಲ. ಆದರೆ ಇದೂ ಕರ್ನಾಟಕದಲ್ಲಿ ಸುಗಮವಾಗಿ ನಡೆಯುತ್ತಿಲ್ಲ. ಕಡೂರು, ಚಿಕ್ಕಮಗಳೂರು ವೈಟ್‌ಫೀಲ್ಡ್ ಬಂಗಾರುಪೇಟೆ, ಕುಪ್ಪಂ ದಾರಿಯ ಡಬ್ಬಲ್ ಲೈನ್ ಮಾಡುವ ಕೆಲಸ ಮಂದಗತಿಯಲ್ಲಿ ಸಾಗುತ್ತಿವೆ.

ರೈಲುದಾರಿಯ ಸೂಚಿ (ಕರ್ನಾಟಕ, ನೆರೆ ರಾಜ್ಯ ಮತ್ತು ಅಖಿಲ ಭಾರತ ಸರಾಸರಿ)

ರಾಜ್ಯ	10 ಲಕ್ಷ ಜನ ಸಂಖ್ಯೆಗೆ ಇರುವ ರೈಲುದಾರಿಯ ಉದ್ದ (ಕಿಲೋ ಮೀಟರುಗಳಲ್ಲಿ)			10,000 ಚದರ ಕಿ. ಮೀ. ಪ್ರದೇಶಕ್ಕೆ ಇರುವ ರೈಲು ದಾರಿಯ ಉದ್ದ (ಕಿ. ಮೀ. ಗಳಲ್ಲಿ)		
	ಬ್ರಾಡ್‌ಗೇಜ್	ಮೀಟರ್‌ಗೇಜ್	ಒಟ್ಟು	ಬ್ರಾಡ್‌ಗೇಜ್	ಮೀಟರ್‌ಗೇಜ್	ಒಟ್ಟು
ಕರ್ನಾಟಕ	16.95	62.80	79.75	9.38	43 21	52.59
ಕೇರಳ	25.50	5.00	30.00	54.05	10.54	64.59
ಆಂಧ್ರ ಪ್ರದೇಶ	66.70	36.90	103.60	40.57	22 43	63.00
ತಮಿಳು ನಾಡು	21.00	71.20	92.20	25.64	87.02	112.66
ಅಖಿಲಭಾರತ ಸರಾಸರಿ	53.60	54.50	108.10	34.63	35.71	70.43

(6ನೇ ಪುಟ ನೋಡಿ)

ರಾಜೀವ ಸರ್ಕಾರದ ನಾಲ್ಕನೇ ಬಜೆಟಿಗೆ ಮುನ್ನ

ಬಂಡವಾಳಶಾಹೀ ವ್ಯವಸ್ಥೆಯಲ್ಲಿ ಬಜೆಟ್ ಅಂದರೆ ಬಂಡವಾಳಶಾಹೀ ವರ್ಗದ ಬಜೆಟ್; ರಾಷ್ಟ್ರೀಯ ಆದಾಯವನ್ನು ವಿವಿಧ ವರ್ಗಗಳು ಹಾಗೂ ಗುಂಪುಗಳಲ್ಲಿ ಮುಂಬರುವ ವರ್ಷದಲ್ಲಿ ಹೇಗೆ ಹಂಚಬೇಕೆಂದು ಆಳುವ ವರ್ಗದ ಪ್ರತಿನಿಧಿಗಳು ನಿರ್ಧರಿಸಿದ್ದಾರೆಂದುಅದು ಹೇಳುತ್ತದೆ; ಆರ್ಥಿಕತೆಯಲ್ಲಿನ ಬಿಕ್ಕಟ್ಟಿನ ಹೊರೆಯನ್ನು ಹೇಗೆ ದುಡಿಯುವ ಜನರ ತಲೆಯ ಮೇಲೆ ಹೊರಿಸಲಾಗುವುದು ಎಂಬುದನ್ನು ಅದು ಸೂಚಿಸುತ್ತದೆ.— ಇದು 'ಐಕ್ಯರಂಗ'ದ ಓದುಗರಿಗೆ ಈಗಾಗಲೇ ತಿಳಿದಿರುವ ಸಂಗತಿ (ನೋಡಿ ಕಳೆದ ವರ್ಷದ ಸಂಚಿಕೆ 9 ಲೇಖನ ಕಾರ್ಲ್‌ಮಾರ್ಕ್ಸ್ ಹಾಗೂ ನಮ್ಮ ಬಜೆಟ್‌ಗಳು)

ಮತ್ತೆ ಫೆಬ್ರವರಿ ಬಂದಿದೆ. ಬಜೆಟ್‌ನ ಮೊದಲಿನಸರ್ಕಾರೀ ಬೆಲೆಯೇರಿಕೆಗಳು ಕೂಡಾ ಜನತೆಯಮೇಲೆ ಬಿದ್ದಾಗಿದೆ, ಯಥಾ ಪ್ರಕಾರ ಕಳೆದ ಒಂದು ವರ್ಷದಲ್ಲಿ ದೇಶದ ಆರ್ಥಿಕತೆಯ ದುಃಸ್ಥಿತಿಯ ಒಂದು ಸೂಚ್ಯಂಕ ಇದು.

ಕೃಷಿ ಉತ್ಪಾದನೆ 13 5 ರಿಂದ14 ಕೋಟಿ ಟನ್‌ಗಳನ್ನು ದಾಟಲಿಕ್ಕಿಲ್ಲೆಂದು ಸರ್ಕಾರೀವಕ್ತಾರರೇ ಅಂದಾಜು ಮಾಡುತ್ತಿದ್ದಾರೆ. 1984-85ರಲ್ಲಿ 15 2 ಕೋಟಿ ಟನ್ ಉತ್ಪಾದನೆಯ ನಂತರ ಮತ್ತೆ ಆ ಮಟ್ಟ ತಲುಪಲು ಕೂಡಾ ದೇಶದ ಆರ್ಥಿಕತೆಯು ಅಸಮರ್ಥವಾಗಿದೆ. (ಈ 15.2 ಕೋಟಿ ಕೂಡಾ 80 ಕೋಟಿ ಜನತೆಯ ದಷ್ಟಕ್ಕೆ ಹೆಚ್ಚಿತ್ತು ಎಂದು ಸರ್ಕಾರೀ ಅಂಕಿ ಅಂಶಗಳು ಹೇಳಿದವು.

ಆದರೆ ಇದು ಬಹಳಷ್ಟು ಅಂಕೆ-ಸಂಖ್ಯೆಗಳ ಕಸರತ್ತು ಎಂದು ಬೇಗನೇ ಎಲ್ಲರಿಗೂ ಸ್ಪಷ್ಟವಾಯಿತು. 1987 ರಲ್ಲಿ ಕೇಂದ್ರ ಸರ್ಕಾರ ಕೈಗಾರಿಕಾ ಉತ್ಪಾದನೆಯ ಹೊಸ ಸೂಚ್ಯಂಕ ಆರಂಭಿಸಿತು. ಇದರಲ್ಲಿ ಮೊದಲು ಇರದಿದ್ದ ಕೆಲವು ಸಣ್ಣ ಪ್ರಮಾಣದ ಉದ್ದಿಮೆಗಳ ಉತ್ಪಾದನೆಯನ್ನು ಸೇರಿಸಲಾಯಿತು. ಸೂಚ್ಯಂಕದ ಹೆಚ್ಚಳಕ್ಕೆ ಇನ್ನೊಂದು ಕಾರಣ ಶ್ರೀಮಂತರ ರಂಗದಲ್ಲೂ ಸ್ಥಿತಿ ಕೃಷಿ ರಂಗಕ್ಕಿಂತ ಬಹಳ ಉತ್ತಮವೇನಿಲ್ಲ ಎಂಬುದು ಸ್ಪಷ್ಟ. ಅಕ್ಟೋಬರ್ ತಿಂಗಳಲ್ಲಿ ಈ ಸೂಚ್ಯಂಕ ಕೂಡಾ 4.6%ಕ್ಕಿಳಿದಿರುವುದು ಇದಕ್ಕೆ ಸಾಕ್ಷಿ.

ರೋಗಗ್ರಸ್ತ ಕೈಗಾರಿಕೆಗಳ ಸಂಖ್ಯೆಯಲ್ಲಾದ ಅತೀವ ಹೆಚ್ಚಳ ಇದಕ್ಕೆ ಇನ್ನೊಂದು ನಿದರ್ಶನ. ಜೂನ್ 1986 ರಿಂದ 1987 ಜೂನ್ ವರೆಗಿನ ಒಂದು ವರ್ಷದ ಅವಧಿಯಲ್ಲಿ ರೋಗಗ್ರಸ್ತ ಕೈಗಾರಿಕೆಗಳ ಸಂಖ್ಯೆ 1 ಲಕ್ಷ 31 ಸಾವಿರದಿಂದ 1 ಲಕ್ಷ 70 ಸಾವಿರ

ನಮಗೆ ಈಗಾಗಲೇ ತಿಳಿದಿರುವಂತೆ ಬೆಲೆಯೇರಿಕೆ, ಹಣದುಬ್ಬರ, ಅಪಮೌಲ್ಯ ಬಡವರನ್ನು ಸುಲಿದು ಆಳುವ ವರ್ಗಗಳ ಜೇಬು ತುಂಬುವ ಒಂದು ಸಾಧನ ಈರೂಪಾಯಿಯ ಅಪಮೌಲ್ಯ ಮಾಡಬೇಕೆಂದು ವಿಶ್ವಬ್ಯಾಂಕ್ ಮುಂತಾದ ರಾಷ್ಟ್ರೀಯ ಸಾಮ್ರಾಜ್ಯಶಾಹೀ ಹಣಕಾಸು ಸಂಸ್ಥೆಗಳು ಒತ್ತಾಯಿಸುತ್ತಲೇ ಬರುತ್ತಿವೆ. ಭಾರತ ಸರ್ಕಾರ ಹೊರನೋಟಕ್ಕೆ ಇದನ್ನು ಒಪ್ಪದಂತೆ ಕಂಡರೂ ಕಳೆದ ಮೂರು ವರ್ಷಗಳಲ್ಲಿ

– ಕೆ.ವಿ

ಈ ವರ್ಷದ ಬಜೆಟ್ ಆರ್ಥಿಕತೆಯ ಸ್ಥಿತಿಯನ್ನು ಸರಿಯಾಗಿ ಪ್ರತಿಫಲಿಸುವಂತಿದ್ದರೆ ಅದು ಕನಿಷ್ಟ 8 ಸಾವಿರ ಕೋಟಿ ರೂ. ಗಳಾಗಬಹುದೆಂದು ಅಂದಾಜು. ಕಳೆದ ಮಾರ್ಚ್‌ನಿಂದ ಡಿಸೆಂಬರ್ ನಡುವಿನ ಅವಧಿಯಲ್ಲಿ ಕೇಂದ್ರ ಸರ್ಕಾರ ರಿಝರ್ವ್ ಬ್ಯಾಂಕ್‌ನಿಂದ ಪಡೆದ ಸಾಲದ ಮೊತ್ತ ಅಸಲೇ 6460 ಕೋಟಿ ರೂ. ಗಳು (ಕಳೆದ ವರ್ಷ ಇದೇ ಅವಧಿಯಲ್ಲಿ 4825 ಕೋಟಿ ರೂ. ಗಳಾಗಿತ್ತಷ್ಟೆ). ರಿಝರ್ವ್ ಬ್ಯಾಂಕಿನಿಂದ ಸರ್ಕಾರ ಪಡೆಯುವ ಸಾಲವೇ ಅಧಿಕೃತವಾಗಿ "ಖೋತಾ" ಎನಿಸಿಕೊಳ್ಳುತ್ತದೆ. ಆದರೆ ವಾಸ್ತವವಾಗಿ ದೇಶದ ಆರ್ಥಿಕತೆಯ ಮೇಲಿನ ಹೊರೆ ಕೇವಲ ಇಷ್ಟೇ ಅಲ್ಲ. ಸರ್ಕಾರ ಹಾಗೂ ಸಾರ್ವಜನಿಕ ವಲಯ ಡಿಬೆಂಚರುಗಳು, ಬಾಂಡುಗಳ ಮೂಲಕ ಎತ್ತುವ ಸಾಲ ವಿದೇಶಿಸಾಲ, ಮುಂತಾದುವೂ ಇದಕ್ಕೆ ಸೇರಬೇಕು. ಒಂದು ಅಂದಾಜಿನ ಪ್ರಕಾರ ಈಗ ದೇಶದ ಮೇಲಿನ ಒಟ್ಟು ಸಾಲದ ಹೊರೆ ಸುಮಾರು 2ಲಕ್ಷ ಕೋಟಿ ರೂ.ಗಳು ಇದರಲ್ಲಿ 23 ಸಾವಿರ ಕೋಟಿ ರೂ. ವಿದೇಶಿಸಾಲ. ಕೇವಲ ಸಾಲದ ಬಡ್ಡಿಗಾಗಿಯೇ ದೇಶ ಸುಮಾರು ಹನ್ನೊಂದು ಸಾವಿರ ಕೋಟಿ ರೂ. ತೆರಬೇಕಾಗಿದೆ. ಇದು ನಾಲ್ಕು ದಶಕಗಳಲ್ಲಿ ಈ ದೇಶದ ಆಳುವ ವರ್ಗಗಳು ದುಡಿಯುವ ಜನತೆಯ ಮೇಲೆ ಹೇರಿರುವ ಅಗಾಧ ಹೊರೆಯ ಒಂದು ಚಿತ್ರ. (ಕೋಷ್ಟಕ 2 ನೋಡಿ)

" ಕೊರತೆ ವಿಪರೀತವಾಗಿದೆ. ನನಗದು ಇಷ್ಟವಿಲ್ಲ " ಎಂದು ಹೇಳಿ ಪ್ರಧಾನ ಮಂತ್ರಿಗಳು ತಮ್ಮ " ಚಿಕ್ಕ, ಚೊಕ್ಕ ಹಾಗೂ ನೇರ " ಮಾತಿಗಾಗಿ ಬೂರ್ಜ್ವಾ ಪಂಡಿತರಾದ ಭೇಷ್ ಅನಿಸಿಕೊಂಡು, " ಮುಂದಿನ ವರ್ಷ ಈ ಕೊರತೆ ಆರು ಸಾವಿರ ಕೋಟಿ ರೂ. ಗಳನ್ನು ಮೀರುವುದಿಲ್ಲ " ಎಂದು ಭರವಸೆ ನೀಡಿ ಒಂದು ವರ್ಷ ಪೂರ್ಣಗೊಳ್ಳುತ್ತದೆ. ದೇಶದ ಮುಂದೆ ಇನ್ನೊಂದು ಬಜೆಟ್, ರಾಜೀವ್ ಸರ್ಕಾರದ ನಾಲ್ಕನೇ ಬಜೆಟ್ ಮಂಡಿತವಾಗುತ್ತಿದೆ. ಈಒಂದು ವರ್ಷದಲ್ಲಿ ತಮ್ಮ ಭರವಸೆ ಈಡೇರಿಸುವಲ್ಲಿ ರಾಜೀವ್‌ಗಾಂಧಿ ಸರ್ಕಾರ ಎಷ್ಟು ಯಶಸ್ವಿಯಾಗಿದೆ, ಈ ಒಂದು ವರ್ಷದಲ್ಲಿ ದೇಶದ ಆರ್ಥಿಕದ ಏರು ಪೇರುಗಳೇನು? ಒಂದು ಸ್ಥೂಲ ಚಿತ್ರ ಇಲ್ಲಿದೆ.

ಅನುಭೋಗದ ಸರಕುಗಳ ಉತ್ಪಾದನೆಯಲ್ಲಿ ಎರಡು ಪಟ್ಟಿಗೂ ಮೀರಿದ ಹೆಚ್ಚಳ. ಉದಾ: ಕಂಪ್ಯೂಟರ್‌ಗಳು ಹಾಗೂ ಇತರ ಇಲೆಕ್ಟ್ರಾನಿಕ್ ಸಾಧನೆಗಳು, ಕಾರುಗಳು, ಸ್ಕೂಟರ್‌ಗಳು ಇತ್ಯಾದಿ. ಇವು ಮುಖ್ಯವಾಗಿ ವಿದೇಶಗಳಿಂದ ಆಮದಾಗಿ ಇಲ್ಲಿ ಕೇವಲ ಜೋಡಣೆಗೊಳ್ಳುವ ಸರಕುಗಳನ್ನು ಉತ್ಪಾದಿಸುವ ಉದ್ಯಮಗಳು ಎಂಬುದು ಇನ್ನೊಂದು ಗಮನಿಸಬೇಕಾದ ಸಂಗತಿ. ಅಂದರೆ ಕೈಗಾರಿಕಾ ಕ್ಕೇರಿತು. ಅಂದರೆ ಪ್ರತಿದಿನ ಕನಿಷ್ಟ 1.. ಕೈಗಾರಿಕಾ ಘಟಕಗಳು ತಮ್ಮ ಕಾರ್ಮಿಕರನ್ನು ಬೀದಿ ಪಾಲು ಮಾಡಿದವು! ಸ್ವಾಭಾವಿಕವಾಗಿಯೇ ಇದು ನಿರುದ್ಯೋಗ ಸಮಸ್ಯೆಯನ್ನುಇನ್ನಷ್ಟು ತೀವ್ರಗೊಳಿಸಿದೆ. ನಗರದಲ್ಲಿನ ನಿರುದ್ಯೋಗವೇ 1985ರಲ್ಲಿ 5.8%ದಷ್ಟು ಹೆಚ್ಚಿದ್ದರೆ, 1986 ಹಾಗೂ 1987 ರಲ್ಲಿ 13%ದಷ್ಟು ಹೆಚ್ಚಿತು. ದೇಶದ ಒಟ್ಟು ನಿರುದ್ಯೋಗಿಗಳ ಸಂಖ್ಯೆ 9 ಕೋಟಿಯನ್ನು ಮೀರಿದೆ ಎಂದು ಅಂದಾಜು ಮಾಡಲಾಗಿದೆ.

ಬೆಲೆಯೇರಿಕೆಯ: ಹೊರಯಂತೂ ಈ ವರ್ಷ ಜನ ಸಾಮಾನ್ಯರನ್ನು ಹಿಂದೆಂದೂ ಇಲ್ಲದಷ್ಟು ಹಣ್ಣುಗಾಯಿ ಮಾಡಿಬಿಟ್ಟಿದೆ. ಸರ್ಕಾರದ ಜೀವನ ವೆಚ್ಚ ಸೂಚ್ಯಂಕದ ಪ್ರಕಾರವೇ ಬೆಲೆಯೇರಿಕೆ 15 / (ಹಿಂದಿನ ವರ್ಷ ಇದು ಸುಮಾರು 10 /. ಇತ್ತು) ಸಗಟು ಬೆಲೆಗಳು ಕೂಡಾ ಈ ವರ್ಷ ಕಳೆದ ವರ್ಷದ ಒಂದೂವರೆ ಪಟ್ಟು ವೇಗದಲ್ಲಿ ಏರಿವೆ. ರೂಪಾಯಿಯ ಬೆಲೆ 1960ಕ್ಕೆ ಹೋಲಿಸಿದರೆ 12 ಪೈಸೆಗಿಳಿದೆಯೆಂದು ಕೇಂದ್ರಮಂತ್ರಿ ವಸಂತ ಸಾಠೆಯವರೇ ಹೇಳಿದ್ದರೆ.

ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ರೂಪಾಯಿಯ ಮೌಲ್ಯ ಅರ್ಧಕ್ಕಿಳಿದಿದೆ.

ಈ ಹಿನ್ನೆಲೆಯಲ್ಲಿ ಕಳೆದ ವರ್ಷ ಹಣಕಾಸು ಮಂತ್ರಿಯೂ ಆಗಿದ್ದ ಪ್ರಧಾನ ಮಂತ್ರಿಗಳು ನೀಡಿದ ಭರವಸೆಯ ಗತಿಯೇನು ? ಹಣಕಾಸು ಖೋತಾ 6 ಸಾವಿರ ಕೋಟಿ ಮೀರುವುದಿಲ್ಲ ಎಂಬುದನ್ನು ಈಗ ಯಾರೂ ಆಳುವ ಪಕ್ಷದ ಬಗ್ಗೆ ಸಹಾನುಭೂತಿಯಿರುವವರೂ ಕೂಡಾ ನಿರೀಕ್ಷಿಸುತ್ತಿಲ್ಲ.

ಕೋಷ್ಟಕ-3

ಬಜೆಟ್‌ಖೋತಾದಲ್ಲಿ ಸತತ ಹೆಚ್ಚಳ

ವರ್ಷ	ಬಜೆಟ್ ಖೋತಾ (ಕೋಟಿ ರೂ.)
1980-81	2477
1981-82	1391
1982-83	1655
1983-84	1416
1984-85	3745
1985-86	4937
1986-87	8285

ಕೋಷ್ಟಕ-1

ಜೀವನಾವಶ್ಯಕ ಸಾಮಗ್ರಿಗಳ ಬೆಲೆಯೇರಿಕೆ (1987)

ಆಹಾರ ಧಾನ್ಯಗಳು	16.2%
ದ್ವಿದಳ ಧಾನ್ಯಗಳು	36.5%
ಹಾಲು ಇತ್ಯಾದಿ	15.5%
ಮಸಾಲೆ ಸಾಮಗ್ರಿ	42.5 /.
ಅಡಿಗೆ ಎಣ್ಣೆ	19.0 /.
ಹತ್ತಿ ಬಟ್ಟೆ	10.6 /.
ಸಾಬೂನು	19.8 /.

(ಈ ಅಂಕೆ-ಸಂಖ್ಯೆ ಸಗಟು ಬೆಲೆ ಸೂಚ್ಯಂಕಗಳನ್ನು ಆಧರಿಸಿದೆ)

ದೇಶಕ್ಕೆ ಯಾವುದೇ ದೃಷ್ಟಿಯಿಂದ ನೋಡಿದರೂ ಅತ್ಯಲ್ಪವೇಎಂಬುದನ್ನು ಗಮನಿಸಬೇಕು) ದೇಶ ಶತಮಾನದ ಅತ್ಯಂತ ಭೀಕರ ಬರಗಾಲ ಎದುರಿಸಬೇಕಾಗಿ ಬಂದುದು ಈ ವಿಫಲತೆಯ ಹಲವು ಕಾರಣಗಳಲ್ಲಿ ಒಂದಷ್ಟೆ.

ಕೈಗಾರಿಕಾ ರಂಗದಲ್ಲಿ ಸ್ಥಿತಿಯೇನಾದರೂ ಸಮಾಧಾನಕರವಾಗಿದೆಯೇ? ಬಹಳ ಉತ್ತಮವಾಗಿದೆ ಎಂದು ಕೆಲವು ತಿಂಗಳ ಹಿಂದೆ ಸರ್ಕಾರ ಡಂಗುರಸಾರುತ್ತಿತ್ತು. 1987ರ ಮೊದಲ 3ತಿಂಗಳಲ್ಲಿ ಕೈಗಾರಿಕಾ ಉತ್ಪಾದನೆ 14.76 ಶೇಕಡಾದಷ್ಟು ಹೆಚ್ಚಿತು. (ಕಳೆದ ಮೂರು ವರ್ಷ ಅದು ಕೇವಲ 8% ಇತ್ತು), ನಂತರ ಸ್ವಲ್ಪ ಇಳಿಮುಖವಾದರೂ ಜುಲೈ 1987 ರ ಹೊತ್ತಿಗೆ 16.1.

ಕೋಷ್ಟಕ-2

ಸಾಲದ ಹೊರೆ

(ಶತ ಕೋಟಿ ರೂ.ಗಳಲ್ಲಿ)

ವರ್ಷ	ಆಂತರಿಕ ಸಾಲ	ಬಡ್ಡಿ	ವಿದೇಶಿ ಸಾಲ	ಬಡ್ಡಿ	ಒಟ್ಟು ಸಾಲ	ಒಟ್ಟು ಬಡ್ಡಿ
1950-51	25.7	—	0.3	—	25.7	—
1960-61	69.7	1.6	7.8	—	77.5	1.6
1970-71	209.2	10.0	64.9	—	274.1	10.0
1980-81	666.8	30 0	113 0	2.9	779.8	32.9
1984-85	1265.3	66.2	166.4	5 3	1431.7	71.5

ಸಹಜವಾಗಿಯೇ ಮುಂದೆ ಇನ್ನಷ್ಟು ಹೆಚ್ಚಲಿರುವ ಈ ಹೊರೆಯ ಭಾರ ಸಹಿಸುವ "ದೇಶ ಪ್ರೇಮೀ" ಕರ್ತವ್ಯವನ್ನು ದುಡಿಯುವ ಜನಗಳೇ ನಿರ್ವಹಿಸಬೇಕೆಂದು ಈ ಬಾರಿಯ ಬಜೆಟ್ ಕೂಡಾ ಹೇಳುತ್ತದೆ ಎಂದು ನಿರೀಕ್ಷಿಸಬಹುದು. ಯಾಕೆಂದರೆ ಶ್ರೀಮಂತರ ಐಷಾರಾಮಕ್ಕೆ ಕತ್ತರಿ ಹಾಕುವುದು "ದೇಶ ಪ್ರೇಮ"ದ ಕೆಲಸವೆಂದು ಆಳುವ ವರ್ಗಗಳು ಎಂದೂ ಪರಿಗಣಿಸಿಲ್ಲ. ಬಂಡವಾಳಶಾಹಿಗಳಿಗೆ ರಿಯಾಯಿತಿಯ ಸುರಿಮಳೆಗರೆದ ರಾಜೀವ್ ಗಾಂಧಿಯವರ ಹೊಸ

(6 ನೇ ಪುಟ ನೋಡಿ)

ಯೋಗ್ಯ ಬೆಲೆಗಾಗಿ ಐಕ್ಯ ಹೋರಾಟಕ್ಕೆ

ಅಡಿಕೆ ಬೆಳೆಗಾರರ ಸಮಾವೇಶದ ಕರೆ

ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ಅಡಿಕೆ ಬೆಳೆಗಾರರ ಸಮಾವೇಶ ಫೆಬ್ರವರಿ 10 ರಂದು ಮಂಗಳೂರಿನ ಪುರಭವನದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿಯವರಾದ ಕಾ|| ಪಿ. ರಾಮಚಂದ್ರರಾವ್ ಅಧ್ಯಕ್ಷತೆಯಲ್ಲಿ ಜರುಗಿತು. ಎಲ್ಲಾ ತಾಲೂಕು ಹಾಗೂ ಸುತ್ತಲ ಜಿಲ್ಲೆಯನ್ನು ಪ್ರತಿನಿಧಿಸಿ ಸಮಾವೇಶದಲ್ಲಿ ಪ್ರತಿನಿಧಿಗಳು ಭಾಗವಹಿಸಿದ್ದರು.

ಕರ್ನಾಟಕ ಪ್ರಾಂತ ರೈತ ಸಂಘದ ದ.ಕ.ಜಿಲ್ಲಾ ಅಧ್ಯಕ್ಷ ಕಾ|| ಕೆ.ಆರ್. ಶ್ರೀಯಾನ್‌ರವರು ಮಾತನಾಡಿ ಅಡಿಕೆ ಬೆಲೆ ಕುಸಿತದಿಂದ ಎದುರಿಸುತ್ತಿರುವ ಸಮಸ್ಯೆ ಬಗ್ಗೆ ವಿವರಿಸಿದರು. ರೈತರು ಖರೀದಿಸುವ ಎಲ್ಲಾ ಅವಶ್ಯಕ ವಸ್ತುಗಳ ಬೆಲೆ ಏರಿರುವಾಗ ರೈತರು ತಮ್ಮ ಉತ್ಪನ್ನಗಳಿಗೆ ನ್ಯಾಯವಾದ ಬೆಲೆ ಕೇಳುವ ಹಕ್ಕಿನಿಂದ ವಂಚಿತರಾಗಿದ್ದಾರೆ ರೈತರ ಬೆಳೆಗೆ ಯೋಗ್ಯ ಬೆಲೆ ನಿಗದಿ ಮಾಡುವಲ್ಲಿ ವಿಫಲಗೊಂಡಿರುವ ಕೇಂದ್ರ ಸರ್ಕಾರದ ನೀತಿ ವಿರುದ್ಧ ರೈತರು ವಿಶಾಲವಾದ ಐಕ್ಯತೆ ಬೆಳೆಸಿ ತಮ್ಮ ಹಕ್ಕುಗಳ ರಕ್ಷಣೆಗಾಗಿ ತೀವ್ರ ಹೋರಾಟಕ್ಕೆ ಸಿದ್ಧರಾಗ ಬೇಕೆಂದು ಅಧ್ಯಕ್ಷ ಭಾಷಣ ಮಾಡಿದ ಕಾ|| ಪಿ ರಾಮಚಂದ್ರರಾವ್ ಕರೆ ನೀಡಿದರು. ಸಮಾವೇಶವನ್ನುದ್ದೇಶಿಸಿ ನ್ಯಾಯವಾದಿ ಮರಕಿಣಿ ಶಂಕರನಾರಾಯಣಭಟ್ಟ, ಕೋಟೆ ವಸಂತಕುಮಾರ್, ಶಂಕರ್‌ನಾರಾಯಣ ಭಟ್(ಬಂಟ್ವಾಳ), ಬಾಲಕೃಷ್ಣ ಪೆರಾಜೆ (ಸುಳ್ಯ) ವೈ. ನಾರಾಯಣಭಟ(ವಿಟ್ಲ) ಪೂವಪ್ಪ(ಮಡಿಕೇರಿ) ಸತ್ಯ ಗಣಪತಿ ಕರೋಪಾಡಿಯವರುಗಳು ಮಾತನಾಡಿ ಸಂಕಷ್ಟಕೀಡಾಗಿರುವ ಅಡಿಕೆ ಬೆಳೆಗಾರರಿಗೆ ನ್ಯಾಯ ದೊರಕಿಸಲು ಸರ್ಕಾರ ಮಧ್ಯೆ ಪ್ರವೇಶಿಸಿ ಅಡಿಕೆ ಬೆಳೆಗೆ ನ್ಯಾಯ ಬೆಲೆ ನಿಗದಿ ಮಾಡಲು ಒತ್ತಾಯಿಸಿದರು ಪಕ್ಷ ಬೇಧ ಮರೆತು ಅಡಿಕೆ ಬೆಳೆಗಾರರು ಮುಂದಿನ ಹೋರಾಟಕ್ಕೆ ಮುಂದೆ ಬರಬೇಕೆಂದರು.

ಪ್ರಾರಂಭದಲ್ಲಿ ಜಿಲ್ಲಾ ರೈತ ಸಂಘದ ಪ್ರ. ಕಾರ್ಯದರ್ಶಿ ಅಬ್ರಹಾಂಕರ್ಕಡ ಸ್ವಾಗತಿಸಿದರು. ಕಾ|| ಬಿ. ವಿಷ್ಣುಮೂರ್ತಿಯವರು ನಿರ್ಣಯ ಮಂಡಿಸಿದರು. ಮುಂದಿನ ಕಾರ್ಯಕ್ರಮ ರೂಪಿಸಲು ಮರಕಿಣಿ ಶಂಕರನಾರಾಯಣಭಟ್, ಪಿ.ರಾಮಚಂದ್ರರಾವ್, ಕೆ.ಆರ್ ಶ್ರೀಯಾನ್, ಅಬ್ರಾಹಂಕರ್ಕಡ, ಬಿ. ವಿಷ್ಣುಮೂರ್ತಿ ಯವರನ್ನೊಳಗೊಂಡ 13 ಜನರ ಸಮಿತಿಯೊಂದನ್ನು ರಚಿಸಲಾಯಿತು. ಕೊನೆಯಲ್ಲಿ ಡೇವಿಡ್ ಕರ್ಕಡ ಧನ್ಯವಾದ ಅರ್ಪಿಸಿದರು.

○

ತ್ರಿಪುರಾ ಚುನಾವಣೆ : ಒಂದು ವಿಶ್ಲೇಷಣೆ

(7 ನೇ ಪುಟದಿಂದ)

ಕರೆಸುವುದರ ಮುಖಾಂತರ ಅಲ್ಲಿರುವ ಬುಡಕಟ್ಟೇತರರು ಕೂಡ ತಮಗೆ ರಕ್ಷಣೆ ನೀಡಲು ಕಾಂಗ್ರೆಸ್ಸಿಗರಿಂದಲೇ ಸಾಧ್ಯ ಎನ್ನುವ ಭಾವನೆಯನ್ನು ಮೂಡಿಸಿ ಓಟುಗಳನ್ನುಗಳಿಸುವ ಒಂದು ಹೊಸ ತಂತ್ರವನ್ನು ಕಾಂಗ್ರೆಸ್ ರಚಿಸಿತು.

ಕೇಂದ್ರ ಸರ್ಕಾರದ ಆಳುವ ಕಾಂಗ್ರೆಸ್ಸಿಗರ ಇಂತಹ ಸಂಚಿನಿಂದಾಗಿ ದೇಶ ಇನ್ನಷ್ಟು ಛಿದ್ರವಾಗುವ ಪರಿಸ್ಥಿತಿ ನಿರ್ಮಾಣವಾಗಿದೆ (ಸೈನ್ಯವನ್ನು ತಮ್ಮ ಆಸ್ತಿಯೆಂಬಂತೆ ಕಾಂಗ್ರೆಸ್‌ನವರು ಬಳಸುತ್ತಿದ್ದಾರೆಯೋ-?) ಪಾಕಿಸ್ತಾನ ಹಾಗೂ ಬಾಂಗ್ಲಾದೇಶಗಳಲ್ಲಿ ನಡೆದ ಸೈನ್ಯ ನೇತೃತ್ವದ ಚುನಾವಣೆಯ ಫಲಿತಾಂಶಗಳು ಯಾರಿಗೆ ಅನುಕೂಲವಾಗಿತ್ತು ? ಎಂಬುದು ಜಗತ್ತಿಗೆ ತಿಳಿದಿರುವ ಒಂದು ಸಂಗತಿಯಾಗಿದೆ.

ಕೇರಳದ ಸ್ಥಳೀಯ ಚುನಾವಣೆಗಳಲ್ಲಿಯೂ ಕೋಮು ಪಕ್ಷಗಳ ಜೊತೆಯಲ್ಲಿ ಹೊಂದಾಣಿಕೆ, ಮಿಜೋರಾಂನಲ್ಲಿ ಛಿದ್ರಕಾರಿ ಶಕ್ತಿಗಳೊಂದಿಗೆ ಹೊಂದಾಣಿಕೆ. ಬೊಂಬಾಯಿಯ ಉಪ ಚುನಾವಣೆಯಲ್ಲಿ (ಶಿವಸೇನೆಯ) ಪ್ರಾಂತೀಯವಾದಿಗಳೊಂದಿಗೆ ಹೊಂದಾಣಿಕೆ ಇಲ್ಲದ್ದಲ್ಲಿ ಪಂಜಾಬ್, ಅಸ್ಸಾಂ, ಮುಂತಾದ ಜಾಗಗಳಲ್ಲಿ ಅಲ್ಲಿರುವ ಸ್ಥಳೀಯಪಕ್ಷಗಳೊಂದಿಗೆ ದೊಡ್ಡ ರೀತಿಯಲ್ಲಿ ಒಪ್ಪಂದಗಳನ್ನು ಮಾಡಿಕೊಂಡು ಚುನಾವಣೆಯಲ್ಲಿ ಸೋತ ನಂತರ ಆ ಒಪ್ಪಂದಗಳನ್ನು ಕಸದ ಬುಟ್ಟಿಗೆ ಬಿಸಾಡುವ ನೀತಿಯಿಂದಾಗಿ ಅಶಾಂತಿಯನ್ನು ಮೂಡಿಸಿ ದೇಶದ ಐಕ್ಯತೆಗೆ ಭಂಗವನ್ನುಂಟು ಮಾಡುವ ಕಾರ್ಯದಲ್ಲಿ ಕಾಂಗ್ರೆಸ್ ಹಾಗೂ ರಾಜೀವರು ನಿರತರಾಗಿದ್ದಾರೆ.

ಇಂದು ರಾಜೀವರ-ಕಾಂಗ್ರೆಸ್ ಪಕ್ಷದ ಆರ್ಥಿಕ ಹಾಗೂ ಸಾಮಾಜಿಕ ನೀತಿಯಿಂದಾಗಿ ಒಂದೆಡೆ ದೇಶ ತತ್ತರಿಸುತ್ತಿದ್ದರೆ, ಮತ್ತೊಂದೆಡೆ ದೇಶದನಿರುದ್ಯೋಗಿಗಳು ಕಂಗಾಲಾಗಿ ಜೀವನಕ್ಕಾಗಿ ನೆರೆ ಹೊರೆ ರಾಜ್ಯಗಳಲ್ಲಿ ಅಲೆಯುವ ಈ ಪರಿಸ್ಥಿತಿಯಲ್ಲಿ, ಕಾಂಗ್ರೆ ಆಯಾ ಸ್ಥಳದ ಪ್ರಾದೇಶಿಕ ಪಕ್ಷಗಳೊಂದಿಗೆ ಸೇರಿ ಕೊಂಡು ಭಾಷೆ, ಜಾತಿ ಹಾಗೂ ಬೇರೆ ಧರ್ಮದ ಅಲ್ಪ ಸಂಖ್ಯಾತರನ್ನು ಬೆದರಿಸಿ ಭೀತಿಯನ್ನುಂಟು ಮಾಡಿ ಕೊನೆಯ ವೇಳೆಯಲ್ಲಿ ತಾವೇ ಅವರಿಗೆ ನೆರವು ನೀಡುವ ನಾಟಕವನ್ನು ಆಡುವುದರ ಮುಖಾಂತರ ಆ ಅಲ್ಪ ಸಂಖ್ಯಾತರ ಓಟುಗಳನ್ನು ಪಡೆದ ನಂತರ ಎಲ್ಲರಿಗೂ ನಾಮ ಹಾಕುವ ಕೆಲಸದಲ್ಲಿ ಕಾಂಗ್ರೆಸ್ಸಿಗರು ಯಶಸ್ವಿಯಾಗಿದ್ದಾರೆ.

ಕಾಂಗ್ರೆಸ್ಸಿಗರ ಈ ರೀತಿಯ ಜೂಜಾಟದಿಂದ ಬೇಸರಗೊಂಡ ಜನರು ಇತ್ತೀಚಿಗೆ ಪ್ರಾಂತೀಯ, ಭಾಷೆ, ಧರ್ಮ, ಜಾತಿಗಳ ಪಕ್ಷಗಳೊಂದಿಗೆಸೇರಿಕೊಂಡು ದೇಶದ ಐಕ್ಯತೆಯನ್ನು ಕಡೆಗಾಣಿಸುತ್ತಿದ್ದಾರೆ.

ಇಂತಹ ನಡತೆಯಿಂದಾಗಿ ದೇಶ ಆದಷ್ಟು ಬೇಗ ಶಾಂತಿಯನ್ನು ಕಳೆದುಕೊಂಡು, ದೊಡ್ಡ ರೀತಿಯಲ್ಲಿ ಹಾನಿಯನ್ನು ಅನುಭವಿಸ ಬೇಕಾಗುತ್ತದೆ. ಎನ್ನುವ ಎಚ್ಚರಿಕೆಯ ಜೊತೆಯಲ್ಲಿ ಇದರ ಲಾಭವನ್ನು, ದೊಡ್ಡ ಶ್ರೀಮಂತರು ಹಾಗೂ ಪರ ರಾಷ್ಟ್ರಗಳು ಪಡೆಯುತ್ತದೆ ಎಂಬುದನ್ನು ಗಮನದಲ್ಲಿಡಬೇಕಾಗುತ್ತದೆ.

ಕೊನೆಯದಾಗಿ ಒಂದು ಮಾತು

ವಿರೋಧ ಪಕ್ಷಗಳು ಹಲವು ರಾಜ್ಯಗಳಲ್ಲಿ ತಮ್ಮ ಮೂಗಿನ ನೇರಕ್ಕೆ ವರ್ತಿಸುತ್ತಿಲ್ಲವೆನ್ನುವ ಕಾರಣಕ್ಕಾಗಿ ಆ ಸರ್ಕಾರಗಳ ಭದ್ರತೆಗೆ ಧಕ್ಕೆಯನ್ನುಂಟುಮಾಡುವ ಎಲ್ಲಾ ರೀತಿನೀತಿಗಳನ್ನು ಕಾಂಗ್ರೆಸ್ ಪಕ್ಷ ಧೈರ್ಯವಾಗಿ ಉಪಯೋಗಿಸಿಕೊಳ್ಳುತ್ತಿದೆ. ಈ ಕಾರಣಕ್ಕಾಗಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಹೊಂದಾಣಿಕೆ ಬಲಿಷ್ಟವಾಗಬೇಕು. ತಪ್ಪಿದಲ್ಲಿ ನ್ಯೂನತೆಯ ದೌರ್ಬಲ್ಯವನ್ನು ಕಾಂಗ್ರೆಸ್ ಪಕ್ಷ ಪಡೆದುಕೊಳ್ಳುತ್ತದೆ.

○

ರೈಲ್ವೆ ಸಾರಿಗೆ ಕರ್ನಾಟಕ ಅಭಿವೃದ್ಧಿಗೆ ತೊಡಕು

(4 ನೇ ಪುಟದಿಂದ)

ಬೆಂಗಳೂರು ನಗರ ತೀವ್ರ ಗತಿ ರೈಲು

ಬೆಂಗಳೂರು ನಗರ ಭಾರತದಲ್ಲೇ ಅತಿ ಹೆಚ್ಚು ವೇಗವಾಗಿ ಬೆಳೆಯುತ್ತಿರುವ ನಗರವೆಂಬ ಖ್ಯಾತಿ ಪಡೆದಿದ್ದು, ಇದರ ಜೊತೆಗೆ ಒಳಸಾರಿಗೆ ವ್ಯವಸ್ಥೆಯ ಸಮಸ್ಯೆ ಅಷ್ಟೇ ತೀವ್ರವಾಗಿ ಏರುತ್ತಿದೆ. ಬೆಂಗಳೂರಿನ ಒಳಸಾರಿಗೆ ಬಸ್ಸು ಮತ್ತು ಖಾಸಗಿ ದ್ವಿಚಕ್ರ ವಾಹನಗಳಿಂದ ಒದಗಿಸಲ್ಪಡುತ್ತಿದೆ. ಒಂದು ಅಧ್ಯಯನದ ಪ್ರಕಾರ ನಗರ ಸಾರಿಗೆ ವಾಹನಗಳ ಶೇಕಡಾ. 1.7 ಭಾಗವಾದ ಬಸ್ 1982 ಶೇಕಡಾ 50 ರಷ್ಟು ಒಟ್ಟು ಟ್ರಿಪ್‌ಗಳನ್ನು ಸಾಗಿಸಿದರೆ, ಶೇಕಡಾ 75ರಷ್ಟು ಭಾಗವಾದ ಖಾಸಗೀ ದ್ವಿಚಕ್ರ ಮತ್ತಿತರ ವಾಹನಗಳು ಶೇಕಡಾ 40ರಷ್ಟು ಟ್ರಿಪ್ಪುಗನ್ನು ಸಾಗಿಸಿದವು. ಆದರೆ ಬಸ್ಸುಗಳ ವಾಹಕ ಸಾಮರ್ಥ್ಯದ ದೃಷ್ಟಿಯಿಂದ ನೋಡಿದರೆ ಖಾಸಗಿ ವಾಹನಗಳು ರಸ್ತೆಯನ್ನು ಅತ್ಯಂತ ಅದಕ್ಷವಾಗಿ ಬಳಸುತ್ತವೆ. ಅತಿದೊಡ್ಡ ನಗರಗಳಲ್ಲಿ ಒಂದು ಪ್ರಮಾಣಕ್ಕಿಂತ ಹೆಚ್ಚಿನ ಖಾಸಗಿ ವಾಹನಗಳ ಏರಿಕೆ ಸಾರಿಗೆ ಸಮಸ್ಯೆಯನ್ನು ಉಲ್ಬಣಗೊಳಿಸುತ್ತವೆ. ಆದರೆ ತೀವ್ರ ಗತಿಯ ದೊಡ್ಡ ಪ್ರಮಾಣದ (ರೈಲಿನಂತಹ) ಸಾರಿಗೆಯ ಅಭಾವದಿಂದಾಗಿ ಖಾಸಗಿ ವಾಹನಗಳ ಸಂಖ್ಯೆ ಅಪಾಯಕಾರಿಯಾಗಿ ಏರುತ್ತಿದೆ. ಆದ್ದರಿಂದ ಬೆಂಗಳೂರಿಗೆ ಮೆಟ್ರೋದಂತಹ ತೀವ್ರಗತಿ ರೈಲು ಸಾರಿಗೆಯ ಅಗತ್ಯವನ್ನು ಹಲವು ಅಧ್ಯಯನಗಳು ಒತ್ತಿ ಹೇಳಿವೆ. ಬಸ್ಸು ಸಾರಿಗೆ ಒಂದೇ ಸಮನೆ ಏರುತ್ತಿರುವ ಸಾರಿಗೆ ಬೇಡಿಕೆಯನ್ನು ಪೂರೈಸಲಾರದು. ಇದಕ್ಕಾಗಿ ರಾಜ್ಯ ಸರ್ಕಾರ, ತಜ್ಞ ಸಂಸ್ಥೆಗಳ ಸಹಕಾರದಿಂದ ವಿವರವಾದ ಯೋಜನೆಗಳನ್ನು ರೂಪಿಸಿದೆ. ಇದರ ಒಟ್ಟು ವೆಚ್ಚ 1000 ಕೋಟಿ ರೂ. ಎನ್ನಲಾಗಿದ್ದು ಇದನ್ನು ಹಂತ-ಹಂತವಾಗಿ ಕೈಗೆತ್ತಿಕೊಳ್ಳಬೇಕಾಗಿದೆ. ಆದರೆ ಇದಕ್ಕೆ ಬೇಕಾದ ಹಣವನ್ನು ಒದಗಿಸಲು ಕೇಂದ್ರ ಸರ್ಕಾರವಾಗಲಿ, ಯೋಜನಾ ಆಯೋಗವಾಗಲಿ, ನಿರಾಕರಿಸುವುದರಿಂದ ಕೆಲಸ ಆರಂಭವಾಗಿಲ್ಲ ಕಲ್ಕತ್ತ ಮೆಟ್ರೋದ ವೆಚ್ಚ ಪೂರ್ಣವಾಗಿ ಕೇಂದ್ರ ವಹಿಸಿಕೊಂಡಿರುವುದರಿಂದ, ಹೆಚ್ಚಿನ ವೆಚ್ಚವನ್ನು ಕೇಂದ್ರ ಸರ್ಕಾರಒದಗಿಸಬೇಕೆಂದುರಾಜ್ಯಸರ್ಕಾರದ ಬೇಡಿಕೆ. ಈ ಯೋಜನೆ ಸಹ ಸಂಪನ್ಮೂಲಗಳ ಅಭಾವದಿಂದ ನನೆಗುದಿಗೆ ಬಿದ್ದಿದೆ.

ವಿಷಮ ಬೆಳವಣಿಗೆ

ಕರ್ನಾಟಕದ ರೈಲುದಾರಿ ಅಭಿವೃದ್ಧಿ ಸಂಪನ್ಮೂಲಗಳ ಅಭಾವ, ಕೇಂದ್ರ-ರಾಜ್ಯ ಆರ್ಥಿಕ ಸಂಬಂಧಗಳಲ್ಲಿ ವಿಷಮತೆಗಳಿಂದಾಗಿ ಕುಂಠಿತವಾಗಿದೆ. ಇದು ಹೆಚ್ಚು ಕಡಿಮೆ ದೇಶದ ವಿವಿಧ ರಾಜ್ಯಗಳ ಮಟ್ಟಿಗೂ ನಿಜ. ಚಾರಿತ್ರಿಕ ಕಾರಣಗಳಿಂದಾಗಿ ಕರ್ನಾಟಕ ಆರಂಭದಿಂದಲೂ ರೈಲು ದಾರಿಯ ಸಂಬಂಧದಲ್ಲಿ ಹಿಂದೆ ಬಿದ್ದಿತ್ತು. ಬ್ರಿಟಿಷರ ಕಾಲದಲ್ಲಿ ರೈಲು ಅಭಿವೃದ್ಧಿ ವಸಾಹತುಶಾಹಿ ಬೆಳವಣಿಗೆಯ ಪ್ರಭುತ್ವದ ರಾಜಕೀಯ ಆರ್ಥಿಕ ಅಗತ್ಯಕ್ಕೆ ಅನುಗುಣವಾಗಿ ಕೆಲವು ಮುಖ್ಯ ನಗರಗಳು ಮತ್ತು ಅದರ ಸುತ್ತಮುತ್ತ ಬೆಳೆದಿತ್ತು. ಕರ್ನಾಟಕ ರಾಜ್ಯ ಆಗ ಈ ದೃಷ್ಟಿಯಿಂದ ಅನುಕೂಲಕರವಾದ ಪ್ರದೇಶವಾಗಿರಲಿಲ್ಲ. ಆದರೆ ಸ್ವಾತಂತ್ರ್ಯ ನಂತರವೂ ಪರಿಸ್ಥಿತಿ ಬದಲಾಗಲಿಲ್ಲ. ದೇಶದಲ್ಲಿ ಮುಂದುವರಿಯುತ್ತಿರುವ ಬಂಡವಾಳಶಾಹಿ ಪದ್ಧತಿಯಿಂದಾಗಿ ಈ ವಿಷಮತೆ ಮುಂದುವರಿದಿವೆ. ಬೆಳವಣಿಗೆಯಲ್ಲಿ ಪ್ರಾದೇಶಿಕಅಸಮಾನತೆಬಂಡವಾಳಶಾಹಿ ಪದ್ಧತಿಯಮುಖ್ಯಗುಣ. ಸ್ವಾತಂತ್ರ್ಯೋತ್ತರ ಅವಧಿಯಲ್ಲೂ ಕರ್ನಾಟಕ ಈ ವಿಷಮತೆಯ ದುಷ್ಪರಿಣಾಮಗಳಿಗೆ ತುತ್ತಾಗಿದೆ.

ರೈಲ್ವೇಯನ್ನು ಲಾಭದಾಯಕವಾಗಿ ನಡೆಸಲು ವಿಶ್ವಬ್ಯಾಂಕ್ ನೀಡಿದ ಸಲಹೆಗಳನ್ನು ಸರ್ಕಾರ ಹಿಂಬಾಗಿಲಿನಿಂದ ತರಲು ಪ್ರಯತ್ನಿಸುತ್ತದೆ. ಇದರಲ್ಲಿ ಖಾಸಗೀಕರಣ, ಯಾವುದೇ ಯೋಜನೆಗಳಲ್ಲಿ ಲಾಭದಾಯಕತೆಯ ಮುಖ್ಯದೃಷ್ಟಿ ಇವು ಸೇರಿವೆ. ಅಲ್ಲದೆ ರೈಲ್ವೆಯಲ್ಲಿ ಕಂಪ್ಯೂಟರೀಕರಣ, ಆಧುನಿಕೀಕರಣದ ಬಗ್ಗೆ ಹೆಚ್ಚು ಒತ್ತು ಈಗಾಗಲೇ ನೀಡುತ್ತಿದೆ. ಇದಕ್ಕೆ ಬೇಕಾದ ಸಂಪನ್ಮೂಲಗಳು ಹೊಸ ಅಭಿವೃದ್ಧಿ ಲೈನುಗಳ ಮತ್ತಿತ್ತರಯೋಜನೆಗಳನ್ನು ಗುಳುಂ ಮಾಡುವ ಸಾಧ್ಯತೆ ಇದೆ.

ರೈಲುದಾರಿ ಅಭಿವೃದ್ಧಿಯ ಬೇಡಿಕೆಗಳಿಗೆ ಕೇಂದ್ರದ ಮಲತಾಯಿ ಧೋರಣೆ ವಿರುದ್ಧದಲ್ಲಿ ಈ ಅಂಶಗಳನ್ನು ನೆನಪಿಡುವುದು ಅಗತ್ಯ. ಈ ಚಳುವಳಿಯಲ್ಲಿ ನುಸುಳಬಹುದಾದ ಭಾಷಾಂಧವಾದಿ, ಪ್ರಾದೇಶಿಕ ಅಂಧವಾದಿ, ಪ್ರತ್ಯೇಕತವಾದಿ ಶಕ್ತಿಗಳನ್ನು ಪ್ರತ್ಯೇಕಿಸಲು ಈ ವಿಷಯವನ್ನು ಜನರಿಗೆ ಮನವರಿಕೆ ಮಾಡಿಕೊಡಬೇಕು. ●

○

ಡಿ. ವೈ. ಎಫ್. ಐ. ಸಭೆಗಳು

ಹಟ್ಟಿಯಲ್ಲಿ ಡಿ.ವೈ.ಎಫ್.ಐ.ನ ಸಭೆ ನಡೆಸಿ 25 ಮಂದಿಯ ಕಾರ್ಯಕಾರಿ ಸಮಿತಿಯೊಂದನ್ನು ರಚಿಸಲಾಯಿತು.

ಗೌಡೂರು ಗ್ರಾಮದಲ್ಲಿ ಜನವರಿ20 ರಂದು ರೈತರ ಸಭೆ ನಡೆಸಲಾಯಿತು.

ಜನವರಿ 25 ರಂದು ಲಿಂಗಸುಗೂರುನಲ್ಲಿ ಡಿ.ವೈ.ಎಫ್.ಐ.ನ ಸಂಘಟನಾ ಸಮಿತಿಯೊಂದನ್ನು ರಚಿಸಲಾಗಿದ್ದು ಕಾ|| ಅಬ್ದುಲ್‌ಗಣಿಯವರು ಸಂಚಾಲಕರಾಗಿರುವ 6 ಜನರ ಸಮಿತಿಯನ್ನು ಆಯ್ಕೆ ಮಾಡಲಾಗಿದೆ.

(5ನೇ ಪುಟದಿಂದ)

ಆರ್ಥಿಕ ನೀತಿಯಿಂದಂತೂ ಈ ನಿರೀಕ್ಷೆ ಮೂರ್ಖತನವೇ. ಆದರೂ ಡಿಸೆಂಬರ್ 9ರ ರ‍್ಯಾಲಿ ಸ್ಪಷ್ಟವಾಗಿ ವ್ಯಕ್ತಪಡಿಸಿದ ದೇಶಾದ್ಯಂತ ಹರಡಿರುವ ತೀವ್ರ ಅಸಂತೃಪ್ತಿಯ ವಾತಾವರಣವನ್ನು ನಿರ್ಲಕ್ಷಿಸುವುದೂ ರಾಜೀವ ಗಾಂಧಿಯವರಿಗೆ ಸುಲಭದ ಕೆಲಸವೇನಲ್ಲ. ಆದ್ದರಿಂದ ರಾಜೀವ್ ಗಾಂಧಿ ಸರ್ಕಾರದ ಈ ನಾಲ್ಕನೇ ಬಜೆಟ್ ಹೊರ ನೋಟಕ್ಕೆ 'ಮೃದು' ವಾಗಿದ್ದು, ಜನತೆಯ ಮೇಲಿನ ಹೊರೆಯನ್ನು ಮರೆಮಾಚುವ ಯತ್ನ ನಡೆಸಬಹುದೆಂಬುದು ಹಲವು ಆರ್ಥಿಕ ತಜ್ಞರ ಅನುಮಾನ. ಅಂದರೆ ನಮ್ಮ ಆಳುವ ವರ್ಗಗಳಿಗಿರುವ ದಾರಿ ಈಗ ಎರಡೇ-ತಮ್ಮ ದಿವಾಳಿಕೋರ ನೀತಿಗಳ ಹೊರೆಯನ್ನು ದುಡಿಯುವ ಜನತೆಯ ಮೇಲೆ ನೇರವಾಗಿ ನಿರ್ಧಾಯಿಸ ಬೇಕು, ಇಲ್ಲವೇ ಮರೆಮಾಚಬೇಕು. [illegible] ?

ಐಕ್ಯರಂಗಕ್ಕೆ

ಚಂದಾದಾರರಾಗಿರಿ

ವಾರ್ಷಿಕ ಚಂದಾ 50ರೂ

ಅರ್ಧ ವಾರ್ಷಿಕ ಚಂದಾ 25ರೂ

ಆಫ್ಘನ್ ಸಮಸ್ಯೆ ಇತ್ಯರ್ಥದ ಹಾದಿಯಲ್ಲಿ

ಆಫ್ಘನ್ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಅಗತ್ಯವಾದ ಸಿದ್ಧತೆಗಳೆಲ್ಲ ಮುಗಿದಿವೆ. ಎಲ್ಲವೂ ನಿರೀಕ್ಷಿಸಿರುವಂತೆ. ಆದರೆ ಮಾರ್ಚ್ ತಿಂಗಳ ಮಧ್ಯದ ವೇಳೆಗೆ ಈ ನಾಡಿನಲ್ಲಿ ಶಾಂತಿ ನೆಲೆಸೀತು. ಸೋವಿಯೆತ್ ಪಡೆಗಳ ನಿರ್ಗಮನಕ್ಕೆ ಕಾಲನಿಗದಿ ಮಾಡುವುದು ಮುಖ್ಯವಾದೊಂದು ಪ್ರಶ್ನೆಯಾಗಿತ್ತು. ಸೋವಿಯೆತ್ ನಾಯಕ ಗೊರ್ಬಚೆವ್ ದಿಟ್ಟತನದ ಉಪಕ್ರಮ ತೆಗೆದುಕೊಂಡು ಖಚಿತವಾದ ದಿನವನ್ನು ಗೊತ್ತುಮಾಡಿದ್ದಾರೆ. ಮೇ15 ರಿಂದ ಪ್ರಾರಂಭವಾಗಿ ಹತ್ತು ತಿಂಗಳೊಳಗೆ ಎಲ್ಲಾ ಸೋವಿಯತ್ ಪಡೆಗಳೂ ವಾಪಸಾಗುವುವು ಎಂದು ಪ್ರಕಟಿಸಿದ್ದಾರೆ. ಇದು ಜಿನಿವಾದಲ್ಲಿ ವಿಶ್ವಸಂಸ್ಥೆಯ ಪ್ರತಿನಿಧಿಯುಮಧ್ಯಸ್ಥಿಕೆಯಲ್ಲಿ ಅಫ್ಘಾನಿಸ್ತಾನ ಮತ್ತು ಪಾಕಿಸ್ತಾನಗಳ ನಡುವೆ ನಡೆಯುವ ಅಂತಿಮ ಸುತ್ತಿನ ಮಾತುಕತೆಗಳು ಫಲಪ್ರದವಾಗುವುದಕ್ಕೆ ಸಹಾಯಕವಾಗಿರುತ್ತದೆ. 1982 ರಿಂದಲೂ ವಿಶ್ವಸಂಸ್ಥೆಯ ಪ್ರತಿನಿಧಿಯೂನಡೆಸುತ್ತಿರುವ ಸಂಧಾನಗಳು ಈಗ ಸಫಲತೆಗೊಳ್ಳುವ ಸ್ಥಿತಿಯಲ್ಲಿದೆ. ವಿವಾದದ ಎಲ್ಲ ಅಂಶಗಳ ಇತ್ಯರ್ಥಕ್ಕೆ ಅಗತ್ಯವಾದ ದಸ್ತಾವೇಜುಗಳು ಹೆಚ್ಚು ಕಡಿಮೆ ಸಿದ್ಧವಾಗಿವೆ. ಅವನ್ನು ಪರಾಮರ್ಶಿಸಿ, ಹಸ್ತಾಕ್ಷರ ಮಾಡುವುದು ಬಾಕಿ ಉಳಿದಿದೆ. ಪರಸ್ಪರರ ಅಂತರಿಕ ವ್ಯವಹಾರಗಳಲ್ಲಿ ತಲೆ ಹಾಕದಿರುವುದು ಮತ್ತು ಪಾಕಿಸ್ತಾನದಲ್ಲಿ ಅಫ್ಘನ್ ನಿರಾಶ್ರಿತರು ತಾಯ್ನಾಡಿಗೆ ಮರಳುವುದರ ಕುರಿತು ಅಫ್ಘನಿಸ್ತಾನ-ಪಾಕಿಸ್ತಾನ ಒಪ್ಪಂದ, ಅಫ್ಘಾನಿಸ್ತಾನದ ಅಂತರಿಕ ವ್ಯವಹಾರಗಳಲ್ಲಿ ಪ್ರವೇಶಿಸದಿರಲು ಅಂತರಾಷ್ಟ್ರೀಯ ಭರವಸೆಗಳು ಮತ್ತು ರಾಜಕೀಯ ಇತ್ಯರ್ಥದ ಎಲ್ಲಾ ಅಂಶಗಳನ್ನು ಒಳಗೊಂಡಿರುವ ಒಪ್ಪಂದ, ಇವೇ ಆ ಒಪ್ಪಂದಗಳು. ಈ ಬಗ್ಗೆ ಮಾತುಕತೆಗಳು ಮಾರ್ಚ್ 2ರಂದು ಪ್ರಾರಂಭವಾಗಿ 15 ರೊಳಗೆ ಮುಗಿಯುವ ನಿರೀಕ್ಷೆ ಇದೆ.

ಒಪ್ಪಂದಕ್ಕೆ ಅನುಕೂಲವಾಗುವಂತೆ ಮಾಡಲು ಬೇಕಾದ್ದನ್ನೆಲ್ಲ ಸೋವಿಯೆತ್ ಒಕ್ಕೂಟ ಮತ್ತು ಅಫ್ಘನಿಸ್ತಾನದ ಸರಕಾರಗಳು ಮಾಡಿವೆ ಅಫ್ಘಾನಿಸ್ತಾನದ ನಜೀಬುಲ್ಲ ಸರ್ಕಾರದ ರಾಷ್ಟ್ರೀಯ ಪುನರೇಕೀಕರಣದ ನೀತಿಯು ಸೋವಿಯೆತ್ ಸೇನೆಗಳ ವಾಪಸಾತಿಗೆ ಮಾರ್ಗವನ್ನು ಸುಗಮವಾಗಿಸಿದೆ. ಈಗಾಗಲೇ ಅಫ್ಘಾನಿಸ್ತಾನದ 13 ಪ್ರಾಂತಗಳಲ್ಲಿ ಸೋವಿಯೆತ್ ಸೇನೆಗಳು ಇಲ್ಲ. ಮೊದಲ ಹಂತದಲ್ಲೇ ತನ್ನ ಸೇನೆಯಲ್ಲಿ ಬಹುಪಾಲನ್ನು ವಾಪಸು ಕರೆಸಿಕೊಳ್ಳುವುದಕ್ಕೂ ಸೋವಿಯೆತ್ ಒಕ್ಕೂಟ ಸಿದ್ಧವಿದೆ.

ಈಗ ಎದುರು ಕಡೆಯವರು ಅನುಕೂಲಕರವಾದ ರೀತಿಯಲ್ಲಿ ಪ್ರಕ್ರಿಯಿಸಿ, ಒಪ್ಪಂದಕ್ಕೆ ಬರಬೇಕಷ್ಟೆ. ಸೋವಿಯೆತ್ ಸೇನೆಯ ವಾಪಸಾತಿ ನಿಸ್ಸಂದೇಹವಾಗಿ ಅಫ್ಘಾನಿಸ್ತಾನದ ಅಂತರಿಕ ವ್ಯವಹಾರಗಳಲ್ಲಿ ತಲೆ ಹಾಕದಿರುವುದಕ್ಕೆ ನಿಕಟವಾಗಿ ಸಂಬಂಧಿಸಿದೆ. ತಮ್ಮ ಭವಿಷ್ಯವನ್ನು ಹೇಗೆ ಬೇಕೋ ಹಾಗೆ ರೂಪಿಸಿಕೊಳ್ಳುವುದು ಅಫ್ಘನ್ ಜನತೆಗೆ ಬಿಟ್ಟದ್ದು.

ಪ್ರಾದೇಶಿಕಘರ್ಷಣೆಗಳು ಮಾನವನ ಶರೀರದಲ್ಲಿ ಹಸಿ ಹುಣ್ಣಿನಂತೆ ಕಿರಿಕಿರಿ, ವಿಷಪೂರಿತವಾಗಿ ಬೆಳೆದು ಮಾರಕವೂ ಆದೀತು ಎಂದು ಗೋರ್ಬಚೆವ್ ಬಣ್ಣಿಸಿರುವುದು ಯಥಾರ್ಥವಾಗಿದೆ. ಆಫ್ಘನ್ ಸಮಸ್ಯೆ ಇತ್ಯರ್ಥವಾದರೆ ಒಂದು ಹುಣ್ಣು ಗುಣವಾದಂತೆ. ಅದು ಇತರ ಹುಣ್ಣುಗಳು ಗುಣವಾಗುವುದಕ್ಕೂ ಅವಕಾಶ ನೀಡಿತು.

ಯುರೋಪಿನಲ್ಲಿ ಎರಡು ವರ್ಗಗಳ ಶಸ್ತ್ರಾಸ್ತ್ರಗಳನ್ನು ಪೂರ್ಣವಾಗಿ ನಿರ್ನಾಮಗೊಳಿಸುವ ಐ.ಎನ್.ಎಫ್. ಕೌಲಿಗೆ ಸಹಿಯಾದ ಮೇಲೆ, ಅಮೇರಿಕಾ ಏಶಿಯ-ಫೆಸಿಫಿಕ್ ವಲಯದಲ್ಲಿ ತನ್ನ ಮಿಲಿಟರಿ ಪ್ರಾಬಲ್ಯವನ್ನು ವರ್ಧಿಸಿಕೊಳ್ಳಲು ಹೊರಟಿವೆ. ಯೂರೋಪಿನಲ್ಲಿ ಹಾಲಿ ಇರುವ ಸಮಬಲವನ್ನು ಎರಡೂ ಕಡೆಯವರು ಒಪ್ಪಿಕೊಂಡಿದ್ದರೂ, ಅಮೇರಿಕ ಏಶಿಯ-ಫೆಸಿಫಿಕ್ ಪ್ರದೇಶದಲ್ಲಿ ಮಿಲಿಟರಿ ಶ್ರೇಷ್ಠತೆಯನ್ನು ಗಳಿಸಿಕೊಳ್ಳಲು ನೋಡುತ್ತಿದೆ.

ಪೆಂಟಾಗನ್ ಈಗಾಗಲೇ ಆಪ್ರದೇಶದಲ್ಲಿ 190 ಯುದ್ಧ ನೌಕೆಗಳನ್ನು ಸುಮಾರು 280 ಟ್ಯಾಂಕುಗಳು, 560 ಭಾರೀ ಫಿರಂಗಿಗಳು (ಇವುಗಳಲ್ಲಿ ಅರ್ಧದಷ್ಟು ನ್ಯೂಕ್ಲಿಯರ್ ಷೆಲ್‌ಗಳನ್ನು ಉಪಯೋಗಿಸಬಲ್ಲವು) ಮತ್ತು ನ್ಯೂಕ್ಲಿಯರ್ ಅಸ್ತ್ರಗಳನ್ನು ಒಯ್ಯುವ ಸಾಮರ್ಥ್ಯವುಳ್ಳವುಗಳನ್ನು ಒಳಗೊಂಡು ಸುಮಾರು 1200 ಯುದ್ಧ ವಿಮಾನಗಳನ್ನು ನಿಯುಕ್ತಿಗೊಳಿಸಿದೆ. ಅಮೇರಿಕಾದ ಅತ್ಯಂತ ನಿಕಟವರ್ತಿಗಳಾದ ಜಪಾನ್ ಮತ್ತು ದಕ್ಷಿಣ ಕೋರಿಯಾಗಳು ಇವಕ್ಕೆ ಬೆಂಬಲವಾಗಿವೆ. ಜಪಾನ್ ಈಗ ವೇಗವಾಗಿ ತನ್ನ ಮಿಲಿಟರಿ ಪ್ರಾಬಲ್ಯವನ್ನು ಹೆಚ್ಚಿಸಿಕೊಳ್ಳುತ್ತಿದೆ. ಅದು ಈಗ 270,000 ಸೈನಿಕರನ್ನು, 50 ಆಧುನಿಕ ಡಿಸ್ಟ್ರಾಯರುಗಳು ಮತ್ತು ಫ್ರಿಗೇಟ್‌ಗಳನ್ನೂ 14 ಸಬ್ ಮೇರಿನ್‌ಗಳನ್ನು, 430 ಯುದ್ಧ ವಿಮಾನಗಳನ್ನು ಮತ್ತು 1,100 ಟ್ಯಾಂಕ್‌ಗಳನ್ನು ಹೊಂದಿದೆ. ದಕ್ಷಿಣ ಕೋರಿಯಾ 600,000 ಆಳು ಬಲದ ಸೈನ್ಯವನ್ನು, 40 ಯುದ್ಧ ನೌಕೆಗಳು ಮತ್ತು 420 ಯುದ್ಧ ವಿಮಾನಗಳನ್ನು ಹೊಂದಿದೆ. ಈ ದೇಶದಲ್ಲಿ ಅಮೇರಿಕ ಭಾರೀ ಸೇನೆಯನ್ನು ಇರಿಸಿಕೊಂಡಿದೆ. ಫೆಸಿಫಿಕ್ ಪ್ರದೇಶದಲ್ಲಿ ಅಮೇರಿಕ ತನ್ನ ಮಿಲಿಟರಿ ಬಲವನ್ನು ಮತ್ತಷ್ಟು ವರ್ಧಿಸಿಕೊಳ್ಳಲು ಹವಣಿಸುತ್ತಿದೆ. ಅದು ಫೆಸಿಫಿಕ್ ಸಾಗರದಲ್ಲಿ ನ್ಯೂಕ್ಲಿಯರ್ ಸಾಮರ್ಥ್ಯವುಳ್ಳ ಯುದ್ಧ ನೌಕೆಗಳ ಸಂಖ್ಯೆಯನ್ನು 1990ರ ಹೊತ್ತಿಗೆ 50ಕ್ಕೆ ಏರಿಸಲು ಬಯಸಿದೆ. 1980ರಲ್ಲಿ ಅದರ ಸಂಖ್ಯೆ 5 ಇತ್ತು.

ಅಮೇರಿಕ ಹಿಂದೂ ಮಹಾಸಾಗರ ಪ್ರದೇಶದಲ್ಲಿರುವ ತನ್ನ ಸೈನಿಕ ನೆಲೆಗಳನ್ನು ಬಲಗೊಳಿಸಲು ಯೋಜಿಸುತ್ತಿದ. ಅಮೇರಿಕಾದ ಈ ನೀತಿಯು ಕಠಿಣವಾದ ಸುದೀರ್ಘ ಸಂಧಾನಗಳ ನಂತರ ಪ್ರಾರಂಭವಾಗಿರುವ ನ್ಯೂಕ್ಲಿಯರ್ ನಿರಾಯುಧೀಕರಣ ಪ್ರಕ್ರಿಯೆಗೆ ಆತಂಕಕಾರಿಯಾಗಿದೆ. ಯೂರೋಪಿನಲ್ಲಿ ನ್ಯೂಕ್ಲಿಯರ್ ಅಸ್ತ್ರಗಳನ್ನು ವಿಸರ್ಜನೆ ಮಾಡಿ, ಏಶಿಯಾದಲ್ಲಿ ನ್ಯೂಕ್ಲಿಯರ್ ಶಕ್ತಿಯನ್ನು ಹೆಚ್ಚಿಸುವುದು ಅವಾಸ್ತವ ಪರಿಣಾಮಕ್ಕೆಡೆ ಕೊಡುತ್ತದೆ. ಅದು ನ್ಯೂಕ್ಲಿಯರ್ ಅಪಾಯವನ್ನು ಒಂದು ಭಾಗದಿಂದ ಇನ್ನೊಂದಕ್ಕೆ ವರ್ಗಾಯಿಸುವುದಾಗಿರುತ್ತದೆ. ಅಮೇರಿಕಾದ ಈ ಕ್ರಮವು ಜಗತ್ತಿನ ಈ ಭೂಭಾಗದಲ್ಲಿ ಶಸ್ತ್ರಾಸ್ತ್ರ ಪೈಪೋಟಿಯ ವರ್ಧನೆಗೆ ಎಡೆಕೊಟ್ಟೀತು.

ತನ್ನ ಏಶಿಯಾದ ಭಾಗದಲ್ಲಿ ಮಧ್ಯಂತರ ವ್ಯಾಪ್ತಿಯ ಕ್ಷಿಪಣಿಗಳನ್ನು ವಿಸರ್ಜಿಸಲು ಒಪ್ಪಿಕೊಂಡ ಸೋವಿಯೆತ್ ಒಕ್ಕೂಟವು ಈ ಪ್ರದೇಶದಲ್ಲಿ ನ್ಯೂಕ್ಲಿಯರ್ ನಿರಾಯುಧೀಕರಣಕ್ಕೆ ಅವಕಾಶ ಮಾಡಿದೆ. ಆದರೆ, ಅಮೇರಿಕ ದಕ್ಷಿಣ ಕೋರಿಯಾ, ಫಿಲಿಪೈನ್, ಡೀಗೋಗಾರ್ಸಿಯಾಗಳಲ್ಲಿ ನ್ಯೂಕ್ಲಿಯರ್ ಬಲವನ್ನು ವರ್ಧಿಸಿದಲ್ಲಿ ಪರಿಸ್ಥಿತಿ ಗಂಭೀರವಾಗುತ್ತದೆ.

ಏಶಿಯಾ-ಫೆಸಿಫಿಕ್ ವಲಯದಲ್ಲಿ ಅಮೆರಿಕ ಮಿಲಿಟರಿ ಬಲವರ್ಧನೆಯನ್ನು ಎಲ್ಲ ಪ್ರಾಮಾಣಿಕ ಸಹೃದಯರೂ ವಿರೋಧಿಸಿ, ತಡೆಯುವುದು ಅಗತ್ಯವಾಗಿದೆ. ಒಂದು ಅಗ್ರ ರಾಷ್ಟ್ರವು ಜಗತ್ತಿನ ಇನ್ನೊಂದು ಭಾಗದಲ್ಲಿ ತನ್ನ ನೂಕ್ಲಿಯರ್ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳತೊಡಗಿದರೆ ನ್ಯೂಕ್ಲಿಯರ್ ಮುಕ್ತಜಗತ್ತು ಬರೀ ಕನಸಾಗುತ್ತದೆ ಅಷ್ಟೆ.

— ಸಿಯೂಕ್ಕಿ

ತ್ರಿಪುರಾ ಚುನಾವಣೆ : ಒಂದು ವಿಶ್ಲೇಷಣೆ

– ಎಸ್. ನಾವರಸನ್

ಸುಮಾರು ಹತ್ತು ವರ್ಷಗಳ ಹಿಂದೆ ಪಶ್ಚಿಮ ಬಂಗಾಳ ಹಾಗೂ ಕಲ್ಕತ್ತಾ ನಗರದ ಸುದ್ದಿಗಳನ್ನು ಕಾಣುತ್ತಿದ್ದಾಗ, ಕೋಮು ಗಲಭೆಗಳಿಂದಾಗಿಯೂ ಅಂದಿನ ಆಳುವ ಪಕ್ಷದ ಅರಾಜಕತೆಯಿಂದ, ಹಿಂಸಾಚಾರ, ರಕ್ತಪಾತದ ಸುದ್ದಿಗಳನ್ನೇ ಓದುವ ಪರಿಸ್ಥಿತಿಗಳಿದ್ದವು.

1977ರ ನಂತರ ರಾಜ್ಯ ಅಧಿಕಾರವನ್ನು ಸಿ.ಪಿ.ಐ.(ಎಂ) ನೇತೃತ್ವದ ಎಡ ಪಕ್ಷದವರು ವಹಿಸಿಕೊಂಡ ನಂತರ ಹಿಂಸಾಚಾರ ಮತ್ತು ಕೋಮು ಗಲಭೆಗಳು ಕಾಣದಂತಾದವು. ಇದು ಒಂದು ನೆಮ್ಮದಿ ಹಾಗೂ ಹೆಮ್ಮೆಯ ಸಮಾಚಾರ.

ಆ ರಾಜ್ಯದ ನೆರೆ ರಾಜ್ಯವಾದ ತ್ರಿಪುರಾದಲ್ಲಿ ಎಡರಂಗದ ಸರ್ಕಾರದ ಆಡಳಿತದ ಯಶಸ್ಸಿನಿಂದಾಗಿ ಜನರಿಗೆನೆಮ್ಮದಿ ಇತ್ತು. ಆದರೆ ಕಳೆದ ಮೂರು ನಾಲ್ಕು ವರ್ಷಗಳಿಂದ ತ್ರಿಪುರಾದ ಬುಡಕಟ್ಟು ಜನರಿಗೂ, ಹಾಗೂ ಬುಡಕಟ್ಟೇತರರಿಗೂ ನಡೆದ ಹೋರಾಟ ದಿನೇ ದಿನೇ ಹೆಚ್ಚಾಗಿ ಕಲಹವಾಗಿ ಬದಲಾಯಿತು. ಇತ್ತೀಚೆಗೆ ಕೊಲೆಗಳ ಸಂಖ್ಯೆ ಹೆಚ್ಚಾಗತೊಡಗಿತು. ಈ ಬಿಕ್ಕಟ್ಟನ್ನು ಪರಿಹರಿಸಲು ಸಿ.ಪಿ.ಎಂ. ನೇತೃತ್ವದ ಎಡ ಪಂಥೀಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಎರಡು ಕೋರಿಕೆಗಳನ್ನೊಳಗೊಂಡ ಮನವಿಯನ್ನು ತಕ್ಷಣಕ್ಕೆ ಸಲ್ಲಿಸಿತು.

1. ಬಾಂಗ್ಲಾದೇಶದಿಂದ ಬರುವ ನಿರಾಶ್ರಿತರನ್ನು ತಡೆ ಮಾಡಲು ಗಡಿಗಳನ್ನು ಕೂಡಲೇ ಮುಚ್ಚುವುದು. (ನಿರಾಶ್ರಿತರ ಹೆಸರಿನಲ್ಲಿ ತ್ರಿಪುರಾ ಜನಾಂಗಗಳ ನೆಮ್ಮದಿಯನ್ನು ಕಬಳಿಸುವ, ತರಬೇತಿ ಪಡೆದ ಗೆರಿಲ್ಲಾಗಳನ್ನು ತಡೆಗಟ್ಟುವ ಉದ್ದೇಶದಿಂದ)

2. ಗಡಿಯನ್ನು ಕಾಯಲು ಹಾಗೂ ಗುಡ್ಡಗಾಡು ಸ್ವಯಂ ಸೇವಾ ಸಂಸ್ಥೆಗೆ (ಟಿ ಎನ್.ವಿ) ಸೇರಿದ ಗೆರಿಲ್ಲಾಗಳ ಹಿಂಸಾಚಾರವನ್ನು ತಡೆಗಟ್ಟಲು, ಗಡಿ ಭದ್ರತಾ ಪಡೆ ಮತ್ತು ರಿಸರ್ವ್ ಪೋಲಿಸರನ್ನು ಕೂಡಲೇ ಕಳುಹಿಸಬೇಕೆಂಬುದು. ಕೆಲವು ವರ್ಷಗಳಿಂದಲೇ ಈ ಎರಡು ಕೋರಿಕೆಗಳನ್ನು ತ್ರಿಪುರಾ ರಾಜ್ಯ ಸರ್ಕಾರ ಕೇಂದ್ರಸರ್ಕಾರವನ್ನು ಒತ್ತಾಯಿಸುತ್ತಿದ್ದಾಗಲೂ ರಾಜೀವ ಗಾಂಧಿಯ ಸರ್ಕಾರ ಕಿವುಡನಂತೆ ವರ್ತಿಸಿತು. ಇದಲ್ಲದೆ ಹಿಂದೆ ಒಂದು ಮುಖ್ಯ ಸಮಾಚಾರವನ್ನು ಆ ರಾಜ್ಯ ಸರ್ಕಾರ ಗುರ್ತಿಸಿತ್ತು. ಅದೇನೆಂದರೆ ಭಾರತದ ಮೂಲೆ ಮೂಲೆಗಳಲ್ಲೂ ಛಿದ್ರಕಾರಿ ಕೆಲಸವನ್ನು ಮಾಡುವ ವಿದೇಶಿ(ಸಿಐಎ) ಏಜೆಂಟರು ತ್ರಿಪುರಾದ ಬುಡಕಟ್ಟು ಜನರನ್ನು, ಗುಡ್ಡಗಾಡುಗಳಲ್ಲಿದ್ದ ಚರ್ಚ್‌ಗಳ ಮುಖಾಂತರ ಶಸ್ತ್ರಾಸ್ತ್ರ ತರಬೇತಿ ನೀಡುತ್ತದೆ ಎಂದು ಗುರ್ತಿಸಿತು. ಈ ವಿಷಯದಲ್ಲೂ ಕೇಂದ್ರದ ಕಾಂಗ್ರೆಸ್ ಸರ್ಕಾರ ಸುಮ್ಮನಿತ್ತು. (ಒಂದು ವೇಳೆ "ಇವೆಲ್ಲಾ ನಮಗೆ ತಿಳಿದಿರುವ ವಿಷಯವೇ " ಎಂದು ಇದ್ದಿರಬಹುದು !)

ಈ ತಿಂಗಳು (ಫೆಬ್ರವರಿ) ತ್ರಿಪುರಾದಲ್ಲಿ ನಡೆದ ರಾಜ್ಯ ಚುನಾವಣೆಯು ಹಲವಾರು ಗಂಭೀರವಾದ ಸಮಾಚಾರವನ್ನು ಚಿಂತಿಸಲು ನೆರವಾಗಿದೆ.

ನಮ್ಮ ಪ್ರಧಾನಿಯವರು ಹೆಚ್ಚೆಚ್ಚಾಗಿ ಗಮನಹರಿಸುವ ಸಂಗತಿಎಂದರೆ ಚುನಾವಣೆ ರಂಗಗಳಲ್ಲಿ. ಅದರಲ್ಲೂಈ ಬಾರಿ ಅತಿ ಹೆಚ್ಚಿನ ಗಮನವನ್ನು ತ್ರಿಪುರಾ ಚುನಾವಣೆಯಲ್ಲಿ ತೋರಿಸಿದರು. ಒಂದು ವೇಳೆ ಇದಕ್ಕೆ ಕಾರಣ ಡಿಸೆಂಬರ್ 9 ರಂದು ದಹಲಿಯಲ್ಲಿ ನಡೆದ ಎಡ ಪಕ್ಷಗಳ ಬೃಹತ್ ಸಭೆಯು ಆದರಲ್ಲಿ ನಲವತ್ತು ವರ್ಷಗಳ ನಂತರ ಮೊಟ್ಟ ಮೊದಲನೆಯದಾಗಿ " ಎಡ ಪಕ್ಷಗಳ ಪರ್ಯಾಯ ನೇತೃತ್ವದ ಕರೆ" ರಾಜೀವರನ್ನು ಕಂಗಾಲು ಮಾಡಿರಬಹುದು !

ತ್ರಿಪುರಾ ಚುನಾವಣೆಯ ಪ್ರಚಾರದಲ್ಲಿ ರಾಜೀವ್‌ಗಾಂಧಿಯವರು ಒಮ್ಮೆ ಹೀಗೆ ಹೇಳಿದರು – " ಕಾಂಗ್ರೆಸ್‌ನ್ನು ನೀವು ಚುನಾಯಿಸಿದಲ್ಲಿ ಟಿ.ಎನ್.ವಿ ಗೆರಿಲ್ಲಾಗಳನ್ನು ನಾವು ನಿಯಂತ್ರಿಸುತ್ತೇವೆ " ಎಂದು ತಿಳಿಸಿದರು. ಇದರ ಅರ್ಥ ತ್ರಿಪುರಾ ಜನರು ಸಿ.ಪಿ.ಎಂ. ನೇತೃತ್ವದ ಪಕ್ಷಗಳನ್ನು ಚುನಾಯಿಸಿದಲ್ಲಿ ಪರಿಸ್ಥಿತಿ ಇನ್ನೂ ಗಂಭೀರಗೊಳಿಸುತ್ತೇವೆ ಎನ್ನುವ ಬೆದರಿಕೆಯು ಇರಬಹುದೆ ?

ಕೇವು ವರ್ಷಗಳ ಹಿಂದೆ ಪಂಜಾಬಿನಲ್ಲಿ ಉಗ್ರಗಾಮಿಗಳಿಗೆ ಸ್ಥಳ ಕೊಟ್ಟು ಛಿದ್ರಕಾರಿಯಾದ ಬಿಂದ್ರನ್‌ವಾಲೆಯನ್ನು ಕೂಡ ರಾಜೀವರು ತಮ್ಮ ಹೆಗಲ ಮೇಲಿರಿಸಿಕೊಂಡು ಅವರುಒಬ್ಬ ಧಾರ್ಮಿಕ ಸನ್ಯಾಸಿ ಎಂದು ಹೇಳಿದರು.

ಈಗ ಅದೇ ರೀತಿಯಲ್ಲಿ ಪಶ್ಚಿಮ ಬಂಗಾಳದಿಂದ ಗೂರ್ಖಲ್ಯಾಂಡ್‌ನ್ನು ಪ್ರತ್ಯೇಕವಾಗಿಕೇಳುವ ಘೀಸಿಂಗ್‌ನ್ನು ದೇಶ ವಿರೋಧಿಯಲ್ಲ ಎಂದು ಕೇಳಿದ್ದನ್ನು ಇಲ್ಲಿ ಸ್ಮರಿಸಬಹುದು.

ರಾಷ್ಟ್ರದಲ್ಲಿ ತನ್ನ ಸ್ಥಾನಮಾನಗಳು ಹಾಗೂಸಂಬಿಕೆಯನ್ನು ಕಳೆದುಕೊಂಡು ಬರುತ್ತಿರುವ ಕಾಂಗ್ರೆಸ್‌ಪಕ್ಷ ಕೋಮುವಾದಿಗಳ, ಛಿದ್ರಕಾರಿಗಳ ಪಕ್ಷಗಳೊಡನೆ ಸೇರಿ ಅವರ ತಾಳಕ್ಕೆ ತಾನೂ ಕುಣಿಯುವ ಸಂದರ್ಭ ಸಾವಕತನವನ್ನು ತಳೆದಿದೆ.

ಈ ದಿಕ್ಕಿನಲ್ಲಿ ತ್ರಿಪುರಾದಲ್ಲಿದ್ದ ಪ್ರಾದೇಶಿಕ ಹಾಗೂ ಜಾತೀಯ ಪಕ್ಷವಾದ ತ್ರಿಪುರಾ ಉಪ ಜಾತಿ ಸಮಿತಿಯೊಡನೆ ಚುನಾವಣೆ ಹೊಂದಾಣಿಕೆ ಮಾಡಿಕೊಂಡಿದ್ದಲ್ಲದೆ ಟಿ.ಯು.ಜೆ.ಎಸ್.ನ ಆಡಿಯಾಳಾಗಿ ವರ್ತಿಸುವ ಟಿ.ಎನ್.ವಿ.ಯನ್ನು ಚುನಾವಣೆ ಕಾಲದಲ್ಲಿ ಹಿಂಸಾಚಾರಕ್ಕೆ ಇಳಿಸಿತು. ತ್ರಿಪುರಾದ ಬುಡಕಟ್ಟೇತರ ಜನರನ್ನು ಕೊಂದು ಭೀತಿಯ ವಾತಾವರಣವನ್ನು ನಿರ್ಮಿಸಿ, ಚುನಾವಣೆಯ ಎರಡು ಮೂರು ದಿನಗಳ ಮುಂಚೆ ಸೈನ್ಯವನ್ನು

(6 ನೇ ಪುಟ ನೋಡಿ)

KRNW/BGS -312

MAG (2) PRB DECR 319/ · 78-79

(1 ನೇ ಪುಟದಿಂದ)

ಮಂಗಳೂರು ತೈಲಾಗಾರ ಸ್ಥಾಪನೆಗಾಗಿ ಜಾಥಾ ನಡೆಸಿ ದುಡಿಯುವ ಜನರ ಧ್ವನಿಯನ್ನು ಎತ್ತಿದೆ. ಇದು ಒಂದು ಕಡೆಯಾದರೆ ಬೆಂಗಳೂರಿನಲ್ಲಿ ರೈಲ್ವೆ ಸಂಘರ್ಷ ಸಮಿತಿಯವರು ರೈಲ್ವೆ ಬಜೆಟ್‌ಗೆ ಮುನ್ನ "ರೈಲು ರೋಕೋ" ಮಾಡಿದರು. ಇದು ಕೇವಲ ಕೆಲವೇ ಜನರ ಪ್ರಯತ್ನ ಹಾಗೂ ಕಡಿಮೆ ಜನರ ಭಾಗವಹಿಸುವಿಕೆ. ಕರ್ನಾಟಕದ ಎಲ್ಲಾ ವರ್ಗಗಳ ಜನರನ್ನು ಮುಟ್ಟುವ ಪ್ರಯತ್ನವಿಲ್ಲದಿದ್ದರೂ ಕೂಡ ಗಮನಾರ್ಹವಾದದ್ದು ಎಂಬುದರಲ್ಲಿ ಸಂಶಯವಿಲ್ಲ.

ದ.ಕ.ದಲ್ಲಿ ಮಂಗಳೂರಿನಿಂದ ಆರಂಭವಾಗಿ ಶಿರೂರು ಗಡಿಯವರೆಗೂ ಮುಟ್ಟಿದ ಜಾಥಾ ಎತ್ತಿದ ಮತ್ತೊಂದು ಪ್ರಶ್ನೆ ಮಂಗಳೂರು ತೈಲಾಗಾರವನ್ನು ಕೂಡಲೇ ಆರಂಭಿಸಬೇಕು ಎಂದು. ಕರ್ನಾಟಕದ ರೈಲ್ವೆ ಅಭಿವೃದ್ಧಿಯು ಕರ್ನಾಟಕದ ವಿವಿಧಭಾಗಗಳಲ್ಲಿ ಕೈಗೊಳ್ಳಬೇಕಾದ ಕೈಗಾರಿಕೆಗಳು ಮತ್ತಿತರ ಅಭಿವೃದ್ಧಿ ಯೋಜನೆಗಳೊಂದಿಗೆ ತಳುಕು ಹಾಕಿಕೊಂಡಿದೆ. ಕೊಂಕಣ ರೈಲ್ವೆ ಪ್ರಶ್ನೆ ಹಾಗೂ ಮಂಗಳೂರು ತೈಲಾಗಾರದ ಪ್ರಶ್ನೆಯೂ ಅಂತೆಯೇ ಒಂದರೊಂದಿಗೆ ಮತ್ತೊಂದು ತಳುಕುಹಾಕಿ ಕೊಂಡಿದೆ ಆದುದರಿಂದ ಕರ್ನಾಟಕದಲ್ಲಿ ರೈಲ್ವೆ ಅಭಿವೃದ್ಧಿಗಾಗಿ ಮಾಡುವ ಎಲ್ಲಾ ಹೋರಾಟಗಳ ಜೊತೆ ಜೊತೆಗೆ ವಿವಿಧ ಪ್ರದೇಶಗಳ ಅಭಿವೃದ್ಧಿ ಪ್ರಶ್ನೆಯನ್ನೂ ಎತ್ತಬೇಕಾಗುತ್ತದೆ ಎಂಬುದನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತೊಮ್ಮೆ ಸಾಬೀತು ಮಾಡಿದೆ. ಈ ಪ್ರಶ್ನೆಗಳ ಬಗೆಗೆ ಕರ್ನಾಟಕದ ಎಲ್ಲಾ ಜನ ವಿಭಾಗಗಳ ಪ್ರತಿನಿಧಿಗಳು ಒಗ್ಗೂಡಿದ ಒಂದು ವ್ಯಾಪಕವಾದ ಸಮಗ್ರವಾದ ಸಂಯುಕ್ತ ಚಳುವಳಿ ಆರಂಭವಾಗಬೇಕು. ಇಂತಹ ಚಳುವಳಿ ಕರ್ನಾಟಕದಲ್ಲಿ ಪ್ರಜಾಸತ್ತಾತ್ಮಕ ಚಳುವಳಿಯನ್ನು ಹೊಸ ಹಂತಕ್ಕೊಯ್ಯುತ್ತದೆ ಎಂಬುದರಲ್ಲಿ ಸಂಶಯವಿಲ್ಲ.

ಜನಾರ್ಧನಪೂಜಾರಿಯವರ ಸರ ಬುರುಡೆ

ಈ ಎರಡು ಪ್ರಶ್ನೆಗಳಿಗೆ ಕೇಂದ್ರ ಸರ್ಕಾರದ ಪ್ರತಿಕ್ರಿಯೆಯೇನು ಮಂಗಳೂರು ತೈಲಾಗಾರಕ್ಕೆ ಮಂಜೂರಾತಿ ದೊರೆತೇ ಬಿಟ್ಟಿದೆ. ಇನ್ನೇನು ಕಾರ್ಯ ಆರಂಭವಾಗಿಯೇ ಹೋಯಿತು ಎಂದು ಮಂಗಳೂರಿಗೆ ಹೋದಾಗೆಲ್ಲಾ ಬೊಬ್ಬಿಡುವ ಕೇಂದ್ರಮಂತ್ರಿ ಹಾಗೂ ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಜನಾರ್ಧನಪೂಜಾರಿಯವರ ಉತ್ತರವೇನು ?

ಈ ಜನರ ಮುಂದಿರುವ ರೈಲ್ವೆ ಬಜೆಟ್‌ನಲ್ಲಿ ಕರ್ನಾಟಕದ ರೈಲು ಮಾರ್ಗಗಳ ಪ್ರಸ್ತಾಪವನ್ನೇ ಮಾಡದಿರುವುದೇ ಕೇಂದ್ರ ಸರ್ಕಾರದ ಉತ್ತರ. ಇದು ರೈಲ್ವೆ ಬಗೆಗಾದರೆ, ಮಂಗಳೂರು ತೈಲಾಗಾರದ ಬಗ್ಗೆ ಕೇಂದ್ರ ಸರ್ಕಾರ ಯಾವ ತೀರ್ಮಾನವನ್ನು ಕೈಗೊಂಡಿಲ್ಲ ಎಂದು ಘಂಟಾಘೋಷವಾಗಿ ಘೋಷಿಸಿದ್ದೇ ತೈಲಾಗಾರ ಪ್ರಶ್ನೆಗೆ ಕೇಂದ್ರ ಸರಕಾರದ ಉತ್ತರ. ಇದು ಇನ್ನೇನು ನಾಳೆ ತೈಲಾಗಾರ ಆರಂಭವಾಗಿಯೇ ಬಿಟ್ಟಿತು. ಎಂಬ ಪೂಜಾರಿಯವರ ಸರಬುರುಡೆಯನ್ನು ನಂಬುವ ಜನರಿಗೂ ಒಂದು ತೀಕ್ಷ್ಣವಾದ ಕಹಿ ಉತ್ತರವಾಗಿದೆ.

ದೂರದರ್ಶನ

ಇನ್ನೂ ದೂರದರ್ಶನದ ಹಿಂದಿ—ಇಂಗ್ಲೀಷ್ ಪ್ರೇಮದ ಪ್ರಶ್ನೆ. ದೂರದರ್ಶನದ ಬಗ್ಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಧೋರಣೆ, ಪಕ್ಷದ ನೇತೃತ್ವದ ಎಡರಂಗ ಸರ್ಕಾರಗಳ ನಿರಂತರ ಹೋರಾಟ ಸರ್ವ ವಿದಿತ. ದೂರದರ್ಶನದ ಬಗ್ಗೆ ಬೆಂಗಳೂರಿನ ಸಾಹಿತಿ ಕಲಾವಿದರ ಬಳಗ ಈ ಕೆಳಗಿನ ಬೇಡಿಕೆಗಳನ್ನು ಮುಂದಿಟ್ಟಿದೆ.

1 ಬೆಂಗಳೂರಿನಿಂದ ಕನ್ನಡ ಕಾರ್ಯಕ್ರಮಗಳು 5-30 ರಿಂದ ಆರಂಭವಾಗಬೇಕು. ರಾತ್ರಿ 8-40 ರಿಂದ 9-00ರವರೆಗೆ ಕನ್ನಡ ಸುದ್ದಿಗಳು ಪ್ರಸಾರವಾಗಬೇಕು.

2. ಈ ಕಾರ್ಯಕ್ರಮಗಳು ಕರ್ನಾಟಕದ 20 ಜಿಲ್ಲೆಗಳಿಗೂ ಪ್ರಸಾರವಾಗಬೇಕು.

3. ಭಾನುವಾರ ಕನ್ನಡ ಚಲನಚಿತ್ರ ಪ್ರಸಾರವಾಗಬೇಕು.

ರಾಷ್ಟ್ರ ಭಾಷೆಗಳಲ್ಲಿ ಒಂದಾದ ಕನ್ನಡಕ್ಕೆ ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಹಿಂದಿಗೆ ಸಮಾನ ಸ್ಥಾನವಿರಬೇಕು.

ಈ ಎಲ್ಲಾ ಬೇಡಿಕೆಗಳೂ ಪ್ರಜಾಸತ್ತಾತ್ಮಕ ಜನ ಸಮಸ್ತರ ಬೇಡಿಕೆಗಳು. ಕೇವಲ ಕನ್ನಡ ಜನರ ಒತ್ತಾಯ ಮಾತ್ರವೇ ಅಲ್ಲ ಭಾರತದ ಜನರೆಲ್ಲರ ಬೇಡಿಕೆಗಳು.

ಭಾರತದ ಸಾಂಸ್ಕೃತಿಕ ಸಂಪತ್ತನ್ನು ಅದರ ಎಲ್ಲಾ ವೈವಿಧ್ಯತೆಯೊಂದಿಗೆ ಭಾರತದ ಜನರ ಮುಂದಿಡುವುದು ಮುಖ್ಯವಾಗಿ ದೂರದರ್ಶನ ಮತ್ತು ಆಕಾಶವಾಣಿಗಳಂತಹ ಜನರ ಹಣದಿಂದ ನಿಯೋಜಿತ

(ಕೊನೆಯ ಕಾಲಂ ನೋಡಿ)

(1 ನೇ ಪುಟದಿಂದ)

ತೋರಿದ ಕೇಂದ್ರ ಮಂತ್ರಿ ಚಿದಂಬರಂ ಹಾಗೂ ಇನ್ನೊಬ್ಬ ಇಂತಹುದೇ ಮಂತ್ರಿ ರಾಜೇಶ್ ಪೈಲಟ್ ನೇತೃತ್ವದಲ್ಲಿ ಕಾಂಗ್ರೆಸ್ ಸದಸ್ಯರು ಎಷ್ಟೊಂದು ಹೇಯವಾಗಿ ನಡೆದುಕೊಂಡರೆಂದರೆ ಸಭಾಧ್ಯಕ್ಷರು ಬೇಸರದಿಂದ "ಶ್ರೀಮಾನ್ ಚಿದಂಬರಂ ಹಾಗೂ ಶ್ರೀಮಾನ್ ರಾಜೇಶ್ ಪೈಲಟ್‌ರವರೇ, ನಿಮಗೆ ನನ್ನ ಸಲಹೆಯೇನೆಂದರೆ ನೀವು ಇನ್ನೇನೂ ಹೆಚ್ಚಿಗೆ ಮಾಡಬೇಕಾಗಿಲ್ಲ. ನೀವು ನಿಮ್ಮ ಪಕ್ಷದಲ್ಲಿ ನಾನು ರಾಜೀನಾಮೆ ನೀಡಬೇಕೆಂದು ನಿರ್ಧರಿಸಿದರೆ ರಾ ಜೀ ನಾ ಮೆ ಕೊಟ್ಟು ತೆರಳುತ್ತೇನೆ" ಎಂದು ಬೆದರಿಸಬೇಕಾಗಿ ಬಂತು.

ಪ್ರಧಾನ ಮಂತ್ರಿಗಳು ತನ್ನ ಪಕ್ಷದ ಸದಸ್ಯರು ದುರ್ವರ್ತನೆ ನಡೆಸುವುದನ್ನು ನೋಡುತ್ತಾ ಕೂತಿದ್ದರು, ಮಾತ್ರವಲ್ಲ ವಾದ-ವಿವಾದಗಳು ಇನ್ನೂ ನಡೆಯುತ್ತಿರುವಾಗಲೇ ಅತ್ಯಂತ ಬೇಜವಾಬ್ದಾರಿಯಿಂದ ಸದನದಿಂದ ಎದ್ದು ಹೋದರೆಂದು ವರದಿಯಾಗಿದೆ.

ಆದ್ದರಿಂದಲೇ ನಂತರ ಸಿ.ಪಿ.ಐ.(ಎಂ)ನ ಕಾಂ. ದಿಪೇನ್ ಘೋಷ್ ಸೇರಿದಂತೆ ಹನ್ನೊಂದು ಪ್ರಮುಖ ಮುಖಂಡರು ಒಂದು ಜಂಟಿ ಹೇಳಿಕೆ ನೀಡಿ ಸಭಾಧ್ಯಕ್ಷರ ರೂಲಿಂಗನ್ನು ಭಂಗಗೊಳಿಸುವಂತೆ ತನ್ನ ಮಂತ್ರಿಗಳು ಹಾಗೂ ಇತರ ಸದಸ್ಯರಿಗೆ ಕುಮ್ಮಕ್ಕು ನೀಡಿದ ಪ್ರಧಾನ ಮಂತ್ರಿಯವರ ಪ್ರಜಾಪ್ರಭುತ್ವ ವಿರೋಧಿ ವರ್ತನೆಯನ್ನು ತೀವ್ರವಾಗಿ ಖಂಡಿಸಿದ್ದಾರೆ. ಸಂಸತ್ತಿನ ಇತಿಹಾಸದಲ್ಲಿ ಹಿಂದೆಂದೂ ಸಭಾಧ್ಯಕ್ಷರೊಂದಿಗೆ ಈ ರೀತಿಯ ವರ್ತನೆ ನಡೆದಿರಲಿಲ್ಲ ಎಂದು ಅವರು ಹೇಳಿದ್ದಾರೆ.

●

ರೈಲ್ವೆ ಬಜೆಟ್

(1 ನೇ ಪುಟದಿಂದ)

ಚಿತ್ರದುರ್ಗ ರಾಯದುರ್ಗ 100ಕಿಲೊ ಮೀಟರ್ ಗೇಜ್‌ಗೆ 4.47 ಕೋಟಿರೂ. ನಿಗದಿಮಾಡಲಾಗಿದೆ.

ಈ ರೈಲ್ವೇ ಮುಂಗಡ ಪತ್ರ ಜನತೆಯ ಮೇಲೆ, ವಿಶೇಷವಾಗಿ ಬಡಜನರ ಮೇಲೆ ನಡೆಸಿರುವ ಇನ್ನೊಂದು ಹಲ್ಲೆ ಎಂದು ಲೋಕಸಭೆಯಲ್ಲಿ ಸಿ.ಪಿ.ಐ.(ಎಂ) ಮುಖ್ಯಸ್ಥರಾದ ಕಾಂ. ವಾಸುದೇವ ಆಚಾರ್ಯ ಹಾಗೂ ರಾಜ್ಯಸಭೆಯಲ್ಲಿ ಉಪ ಮುಖಂಡರಾದ ಕಾಂ. ದಿಪೇನ್ ಘೋಷ್ ಜಂಟಿ ಹೇಳಿಕೆಯೊಂದರಲ್ಲಿ ಟೀಕಿಸಿದ್ದಾರೆ. ಇದು ಬೆಲೆಯೇರಿಕೆಯ ದರವನ್ನು ಇನ್ನಷ್ಟು ತೀವ್ರಗೊಳಿಸುತ್ತದೆ ಎಂದು ಅವರು ಹೇಳಿದ್ದಾರೆ.

ಕರ್ಪೂರಿ ಠಾಕೂರ್‌- ಪಿ. ಬಿ. ಶ್ರದ್ಧಾಂಜಲಿ

ಖ್ಯಾತ ಸ್ವಾತಂತ್ರ್ಯ ಹೋರಾಟಗಾರ, ಹಾಗೂ ಸಮಾಜವಾದೀ ಆಂದೋಲನದ ಒಬ್ಬ ಪ್ರಮುಖ ಮುಖಂಡ, ಶ್ರೀಕರ್ಪೂರಿ ಠಾಕೂರ್‌ರವರ ನಿಧನದ ಬಗ್ಗೆ ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ತನ್ನ ಸಂತಾಪ ವ್ಯಕ್ತಪಡಿಸಿದೆ. ಮೂರು ಭಾರಿ ಬಿಹಾರದ ಮುಖ್ಯ ಮಂತ್ರಿಯಾಗಿದ್ದು, ಲೋಕದಳ (ಬಿ)ಯ ರಾಷ್ಟ್ರೀಯ ಮುಖಂಡರಾಗಿದ್ದ ಅವರು ತಮ್ಮ ರಾಜಕೀಯ ಜೀವನ ವಿಡೀ ಸಮಾಜಿಕವಾಗಿ ತುಳಿತಕ್ಕೊಳಗಾದ ಜನವಿಭಾಗಗಳ ಆಕಾಂಕ್ಷೆಗಳಿಗೆ ದನಿ ನೀಡಲು ಪ್ರಯತ್ನಿಸಿದರು ಎಂದು ಪಾಲಿಟ್‌ಬ್ಯೂರೋ ಶ್ರದ್ಧಾಂಜಲಿ ಅರ್ಪಿಸಿದೆ.

(1 ನೇ ಪುಟದಿಂದ)

ವಾದ ಪ್ರಸಾರ ಮಾಧ್ಯಮಗಳ ಕೆಲಸ. ಜೊತೆಗೆ ಭಾರತದ ಜನರು ಒಪ್ಪುವ ಎಲ್ಲಾ ರಾಜಕೀಯ ವಿಚಾರ ಪ್ರಣಾಲಿಗಳೂ ಜನರ ಮುಂದೆ ಮಂಡಿತವಾಗಬೇಕು. ಅಧಿಕಾರ ಕೇಂದ್ರೀಕರಣದ, ಏಕ ಪಕ್ಷ ಸರ್ವಾಧಿಕಾರ ಹೇರುವ ಸಾಧನವಾಗಬಾರದು ಎಂಬುದು ಅದಕ್ಕಿಂತ ಮುಖ್ಯ.

ಸಾಹಿತಿ-ಕಲಾವಿದರ ಬಳಗದ ಬೆಂಗಳೂರು ಚಳುವಳಿ ಭಾರತದ ಜನರ ಪ್ರಜಾಸತ್ತಾತ್ಮಕ ಬೇಡಿಕೆಗಳಲ್ಲಿ ಹಲವನ್ನು ಮಂಡಿಸಿ ಹೋರಾಟದ ಹಾದಿಯಲ್ಲಿದೆ. ಈ ಚಳುವಳಿಯ ಒತ್ತಾಯಗಳಲ್ಲಿ ಕೆಲವು ಹಾಗೂ ಹೋರಾಟದ ವಿಧಾನಗಳಲ್ಲಿ ಹಲವು ದೋಷಗಳಿವೆ ಎಂಬುದು ನಿಜವಾದರೂ ಇವು ಕನ್ನಡ ಜನರ ಪ್ರಜಾಸತ್ತಾತ್ಮಕ ಆಕಾಂಕ್ಷೆಯನ್ನು ಪ್ರತಿಬಿಂಬಿಸುತ್ತವೆ.

ಈ ಬಳಗದ ಒತ್ತಾಯದಲ್ಲಿ ಹಿಂದಿ ಹೇರಿಕೆಗೆ ಬಲವಾದ ಪ್ರತಿಭಟನೆಯ ಅಂಶ ಕಾಣುತ್ತಿದ್ದರೂ ಭಾರತದಲ್ಲಿ ಕೇವಲ ಶೇ.5 ರಷ್ಟು ಜನರಿಗೂ ಅರ್ಥವಾಗದ ಇಂಗ್ಲೀಷ್ ಕಾರ್ಯಕ್ರಮಗಳ, ರಾ.ಜ.ಸಿ. ಕಾರ್ಯಕ್ರಮಗಳ ಬಗ್ಗೆ ಚಕಾರವಿಲ್ಲ ಎಂಬುದನ್ನು ದೂರದರ್ಶನದ ಮೂಲಕ ಏಕ ಪಕ್ಷ ಪ್ರಣಾಲಿ ಮಂಡಿತವಾಗುತ್ತಿರುವ ಪ್ರಶ್ನೆಯನ್ನೂ ಎತ್ತಿಯೇ ಇಲ್ಲ ಎಂಬುದನ್ನೂ ಪ್ರಜಾಸತ್ತಾತ್ಮಕ ಚಳುವಳಿ ಗಮನಕ್ಕೆ ತೆಗೆದುಕೊಳ್ಳಬೇಕು. ಮತ್ತೊಂದು ಬೇಡಿಕೆಯನ್ನೂ ಇವರು ಮಂಡಿಸಿದ್ದಾರೆ. ನಿರ್ದೇಶಕರಿಂದ ಹಿಡಿದು ಎಲ್ಲಾ ಉದ್ಯೋಗಿಗಳೂ ಕನ್ನಡಿಗರಾಗಬೇಕು. ದೂರದರ್ಶನದಲ್ಲಿ ಕರ್ನಾಟಕದ ಜನ ಜೀವನದ ವೈವಿಧ್ಯಗಳು ತಮ್ಮ ಶ್ರೀಮಂತಿಕೆಯನ್ನು ಮೆರೆಯಬೇಕಾದರೆ ಕಾರ್ಯಕ್ರಮ ನಿಯೋಜಕರು ನಿರ್ಧಾರಕರಲ್ಲಿ ಕನ್ನಡ ಸಂಸ್ಕೃತಿಯ ವಿಸ್ತಾರವಾದ ಅಧ್ಯಯನ ಇರುವವರು ಇರಬೇಕು ಎಂಬ ವಿಷಯದಲ್ಲಿ ಸಂಶಯವಿಲ್ಲ. ಆದರೆ ಕನ್ನಡಿಗರಲ್ಲದವರು ಯಾವ ಹುದ್ದೆಯಲ್ಲಿಯೂ ಇರಬಾರದು-ತಾಂತ್ರಿಕ ಹುದ್ದೆಗಳಲ್ಲಿ ಕೂಡ-ಎಂಬುದು ಭಾರತೀಯ ಪ್ರಜಾಸತ್ತಾತ್ಮಕತೆಗೆ ಒಂದು ಪೆಟ್ಟಾಗುತ್ತದೆ ಎಂಬುದನ್ನು ಮರೆಯಬಾರದೂ ಇನ್ನು ಹೋರಾಟದ ವಿಧಾನವಾಗಿ ಜನರನ್ನು ಎಚ್ಚರಗೊಳಿಸಿ ಒಳಗೊಳಿಸಿಕೊಳ್ಳುವ ಮಾರ್ಗಗಳನ್ನು ಒಪ್ಪಬಹುದಾದರೂ "ವೈಯುಕ್ತಿಕ ಸಾಹಸವಾದಿ" ಕ್ರಮಗಳು ಜನರನ್ನು ನಿಷ್ಕ್ರಿಯತೆಗೆ ದೂಡುತ್ತವೆ. ಕೇವಲ ಹೀರೋಗಳು ತಮ್ಮ ಪರವಾಗಿ ಕೆಲಸ ಮಾಡುತ್ತಾರೆ. ತಾವು ಚಿಂತಿಸ ಬೇಕಾದ್ದಿಲ್ಲ ಎಂಬ ಭಾವನೆಗೆ ಜನರನ್ನು ಬಲಿ ಮಾಡುತ್ತವೆ.

(3 ನೇ ಪುಟದಿಂದ)

51	ತಿಮ್ಮಯ್ಯ	20 ರೂ.
52	ರಾಮಲಿಂಗಂ	15 ರೂ.
53	ಬಾಲಕೃಷ್ಣ	"
54	ರಾಜೇಂದ್ರರಾವ್	"
55	ಸಿ.ಪಿ.ನರಸಿಂಹಯ್ಯ	"
56	ಕದಿರವೇಲು	10 ರೂ.
57	ಜಾನ್	
58	ವೇದನಾಯಗಂ	"
59	ವಿಜಯಬಾಸ್ಕರ್	"
60	ಆನಂದ್‌ರಾಜ್	"
61	ಶ್ರೀನಿವಾಸನ್	"
62	ರಾಮರೆಡ್ಡಿ	"
63	ಪ್ರಾಣೇಶ್ವರರಾವ್	"
64	ನಂಜ	"
65	ಎಂ.ಡಿ.ಮೂರ್ತಿ	"
66	ಸಿದ್ದಪ್ಪ	"
67	ಪುಟ್ಟರಾಜ್	"
68	ಗೋವಿಂದರಾಜ್	"
69	ಹರಿಮಂಟೋರಿಯ	"
	ಒಟ್ಟು	5340

printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053 Editorial and Managerial Office : L-56, K. V. Temple Street,
Sultanpet B-53 Phone · 75331 UMA Printers B-53 Editor : P. Ramachandra Rao Managing Editor : N. K. Upadhyaya